# ಮೈಸೂರು ವಿಶ್ವವಿದ್ಯಾನಿಲಯ

ಮೈಸೂರು ವಿಶ್ವವಿದ್ಯಾನಿಲಯದ ಕ್ರಾಫರ್ಡ್ ಭವನದ ಶಿಕ್ಷಣ ಮಂಡಳ ಸಭಾಂಗಣದಲ್ಲಿ ದಿನಾಂಕ 04-09-2020ರಂದು ಪೂರ್ವಾಹ್ನ 11.30 ಗಂಟೆಗೆ ಜರುಗಿದ ಸಿಂಡಿಕೇಟಿನ ಐದನೇ ಸಾಮಾನ್ಯ ಸಭೆಯ ನಡವಳಿಗಳು.

<u>ಹಾಜರಿದ್ದ ಸದಸ್ಯರು:</u>

| | | |
|---|---|---|
| 1. | ಪ್ರೊ. ಜಿ. ಹೇಮಂತಕುಮಾರ್ | – ಕುಲಪತಿಗಳು ಹಾಗೂ ಅಧ್ಯಕ್ಷರು |
| 2. | ಶ್ರೀ ಆರ್. ಮೂಗೇಶಪ್ಪ<br>ಜಂಟಿ ನಿರ್ದೇಶಕರು, ಕಾಲೇಜು ಶಿಕ್ಷಣ ಇಲಾಖೆ, ಬೆಂಗಳೂರು | – ಸದಸ್ಯರು |
| 3. | ಪ್ರೊ.ಡಿ.ಆನಂದ | – ಸದಸ್ಯರು |
| 4. | ಕು. ಸಹನಾ ಶಿವಪ್ಪ | – ಸದಸ್ಯರು |
| 5. | ಶ್ರೀ. ಕುಮಾರ | – ಸದಸ್ಯರು |
| 6. | ಶ್ರೀಮತಿ ಕೆ.ನಾಗರತ್ನಮ್ಮ | – ಸದಸ್ಯರು |
| 7. | ಶ್ರೀ.ದಿನೇಶ್ ಎಂ ಗಾವಂಕರ್ | – ಸದಸ್ಯರು |
| 8. | ಶ್ರೀ. ಆರ್. ಪ್ರದೀಪ್ ಕುಮಾರ್ ದೀಕ್ಷಿತ್ | – ಸದಸ್ಯರು |
| 9. | ಪ್ರೊ. ಎಸ್. ಡಿ.ದೊಡ್ಡಾಚಾರಿ | – ಸದಸ್ಯರು |
| 10. | ಶ್ರೀಮತಿ ಪವಿತ್ರ. ವೈ.ಕೆ | – ಸದಸ್ಯರು |
| 11. | ಡಾ. ಈ. ಸಿ. ನಿಂಗರಾಜ್ ಗೌಡ | – ಸದಸ್ಯರು |
| 12. | ಡಾ. ಎಂ. ಎಸ್. ದಾಮೋಧರ್ | – ಸದಸ್ಯರು |
| 13. | ಡಾ. ಸೈಯದ್ ಕಾರ್ಝೂ ಮೊಹಿದ್ದಿನ್ | – ಸದಸ್ಯರು |
| 14. | ಪ್ರೊ. ಕೆ. ಎಂ. ಮಹದೇವನ್<br>ಕುಲಸಚಿವರು (ಪರೀಕ್ಷಾಂಗ) | – ಸದಸ್ಯರು |
| 15. | ಪ್ರೊ. ಆರ್. ಶಿವಪ್ಪ | –ಕುಲಸಚಿವರು ಹಾಗೂ ಸದಸ್ಯ ಕಾರ್ಯದರ್ಶಿಗಳು |

<u>ಹಾಜರಾಗದ ಸದಸ್ಯರು:</u>

1. ನಿರ್ದೇಶಕರು, ತಾಂತ್ರಿಕ ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ
2. ಶ್ರೀ. ಟಿ. ರಾಮಕೃಷ್ಣ, ಎ.ಡಿ.ಬಿಳಿಗೌಡ ಪ್ರ.ದ.ಕಾ, ಕೊಪ್ಪ, ಮದ್ದೂರು ತಾ ಮಂಡ್ಯ ಜಿಲ್ಲೆ
3. ನಿರ್ದೇಶಕರು, ವೈದ್ಯಕೀಯ ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ
4. ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ
5. ನಿರ್ದೇಶಕರು, ಪದವಿಪೂರ್ವ ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ

ಮೊದಲಿಗೆ, ಇತ್ತೀಚೆಗೆ ನಿಧನರಾದ ಭಾರತದ ಮಾಜಿ ರಾಷ್ಟ್ರಪತಿಯಾದ ಭಾರತರತ್ನ ಶ್ರೀ ಪ್ರಣಬ್ ಮುಖರ್ಜಿರವರು ನಿಧನರಾದ ಪ್ರಯುಕ್ತಮೃತರ ಗೌರವಾರ್ಥ ಎರಡು ನಿಮಿಷಗಳ ಕಾಲ ಮೌನವನ್ನಾಚರಿಸಲಾಯಿತು.

ತದನಂತರ, ಕುಲಸಚಿವರು ಸಿಂಡಿಕೇಟ್‌ನ ಐದನೇ ಸಾಮಾನ್ಯ ಸಭೆಗೆ ಆಗಮಿಸಿದ್ದ ಎಲ್ಲಾ ಸದಸ್ಯರುಗಳನ್ನು ಸ್ವಾಗತಿಸಿದರು ಹಾಗೂ ಹೊಸದಾಗಿ ಸಿಂಡಿಕೇಟಿಗೆ ನಾಮನಿರ್ದೇಶನಗೊಂಡಿರುವ ಶ್ರೀ ಕುಮಾರ, ಪ್ರಾಂಶುಪಾಲರು, ಸುಜಲ ವಾಣಿಜ್ಯ ಕಾಲೇಜು, ಹಾಸನ ಹಾಗೂ ಶ್ರೀಮತಿ ಕೆ.ನಾಗರತ್ನಮ್ಮ, ಪ್ರಾಂಶುಪಾಲರು, ಸರ್ಕಾರಿ ಪ್ರಥಮ ಕರ್ಜೆ ಕಾಲೇಜು, ಹಳೆ ಸಂತೆಮಾಳ ರಸ್ತೆ, ಟಿ. ನರಸಿಪುರ, ಮೈಸೂರು ಜಿಲ್ಲೆ ಇವರುಗಳನ್ನು ಸ್ವಾಗತಿಸಿ ಸಭೆಗೆ ಪರಿಚಯಿಸಿದರು.

ನಂತರ ಕಾರ್ಯಸೂಚಿಯನ್ನು ಚರ್ಚೆಗೆ ಕೈಗೆತ್ತಿಕೊಳ್ಳಲಾಯಿತು.

| ವಿಷಯ ಸಂಖ್ಯೆ | ವಿಷಯ ಸಂಕ್ಷಿಪ್ತವಾಗಿ |
|---|---|
| ವಿಷಯ I | ದಿನಾಂಕ 14-07-2020ರಂದು ನಡೆದ ಸಿಂಡಿಕೇಟಿನ ನಾಲ್ಕನೇ ಸಾಮಾನ್ಯ ಸಭೆಯ ನಡವಳಿಗಳನ್ನು ದೃಢೀಕರಿಸುವ ಬಗ್ಗೆ |
| ತೀರ್ಮಾನ | ದಿನಾಂಕ 14-07-2020ರಂದು ನಡೆದ ಸಿಂಡಿಕೇಟಿನ ನಾಲ್ಕನೇ ಸಾಮಾನ್ಯ ಸಭೆಯ ನಡವಳಿಯನ್ನು ದೃಢೀಕರಿಸಲಾಯಿತು. |
| 2020/8.1 | ದಿವಂಗತ ಎನ್. ಜಯರಾಮು, ಸೇವಕ, ವಿವಿ ತಾಂತ್ರಿಕ ವಿಭಾಗ, ಮಾನಸಗಂಗೋತ್ರಿ, ಮೈಸೂರು ಅವರ ಮಗನಾದ ಶ್ರೀ ಜೆ. ನಿಖಿಲ್‌ಗೌಡ ರವರಿಗೆ ಅನುಕಂಪದ ಆಧಾರದ ಮೇಲೆ ಉದ್ಯೋಗ ನೀಡುವ ಬಗ್ಗೆ. |
| ತೀರ್ಮಾನ | ಪ್ರೊ.ಎಸ್.ಡಿ.ದೊಡ್ಡಾಚಾರಿ ಅವರು ಮಾತನಾಡಿ, ಕಾರ್ಯಸೂಚಿಯಲ್ಲಿರುವ ಅಡಕವನ್ನು ಪರಿಶೀಲಿಸಿದಾಗ ಅದರಲ್ಲಿ ಅನುಕಂಪದ ಆಧಾರದ ಮೇಲೆ ಉದ್ಯೋಗಕ್ಕೆ ಅರ್ಜಿ ಸಲ್ಲಿಸಿರುವ ಉದ್ಯೋಗಿಗೆ ಸಂಬಂಧಪಟ್ಟ ದಾಖಲಾತಿಗಳು ಲಗತ್ತಿಸಿರುವುದಿಲ್ಲ ಎಂಬ ಅಂಶವನ್ನು ಸಭೆಯ ಗಮನಕ್ಕೆ ತಂದರು. ಇನ್ನು ಮುಂದೆ ಅರ್ಜಿಯೊಂದಿಗೆ ಉದ್ಯೋಗಿಯ ಮರಣ ಪ್ರಮಾಣ ಪತ್ರ, ಕುಟುಂಬ ಜೀವಿತ ಸದಸ್ಯರ ದೃಢೀಕರಣ ಪತ್ರ, ಜಾತಿ ಪ್ರಮಾಣ ಪತ್ರ, ಪಿಂಚಣಿ ಹಾಗೂ ಮಂಜೂರಾತಿ ಆದೇಶದ ನಕಲು ಪ್ರತಿಗಳನ್ನು ಕಾರ್ಯಸೂಚಿಯಲ್ಲಿ ಲಗತ್ತಿಸಬೇಕೆಂದು ತಿಳಿಸಿದರು.<br><br>ಶ್ರೀ ಜಯರಾಮು, ಸೇವಕ, ವಿವಿ ತಾಂತ್ರಿಕ ವಿಭಾಗ, ಮಾನಸಗಂಗೋತ್ರಿ, ಮೈಸೂರು ಇವರು ಸೇವೆಯಲ್ಲಿದ್ದಾಗಲೇ ನಿಧನ ಹೊಂದಿದ್ದು, ಅವರ ಮಗನಾದ ಶ್ರೀ. ಜೆ. ನಿಖಿಲ್‌ಗೌಡ ರವರು ಎಸ್.ಎಸ್.ಎಲ್.ಸಿ ತೇರ್ಗಡೆ ಹೊಂದಿರುವುದಿರಂದ ವಿ.ವಿಅಧಿನಿಯಮಗಳ ಸೆಕ್ಷನ್ 4(1)ರ ಅನ್ವಯ ಶ್ರೀ ಜೆ. ನಿಖಿಲ್‌ಗೌಡ ಅವರಿಗೆ ಅನುಕಂಪದ ಆಧಾರದ ಮೇಲೆ ಪರಿಚಾರಕರಾಗಿ ನೇಮಕಮಾಡಲು ಸಿಂಡಿಕೇಟ್ ಸಭೆಯು ಅನುಮೋದಿಸಿತು. |
| 2020/8.2 | ಪ್ರೊ. ವೈ.ಎಸ್. ಸಿದ್ದೇಗೌಡ ರವರ ಹೆಸರಿನಲ್ಲಿ ದತ್ತಿ ಉಪನ್ಯಾಸ ಸ್ಥಾಪನೆ ಮಾಡುವ ಬಗ್ಗೆ. |
| | ಹಳೆಯ ವಿದ್ಯಾರ್ಥಿಗಳ ಸಂಘ, ಸಮಾಜಕಾರ್ಯ ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಮೈಸೂರು ಇವರು ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಪ್ರೊ.ವೈ.ಎಸ್.ಸಿದ್ದೇಗೌಡರವರ ಹೆಸರಿನಲ್ಲಿ ದತ್ತಿ ಉಪನ್ಯಾಸ ಸ್ಥಾಪನೆ ಮಾಡಲು ಅನುಮತಿ ಕೋರಿ ರೂ. 5,00,000/-ಗಳನ್ನು ನೀಡಿರುತ್ತಾರೆ.<br>ದಾನಿಗಳು ದತ್ತಿಯ ನಿಬಂಧನೆಯಲ್ಲಿ ಪ್ರತಿ ವರ್ಷ ಸದರಿ ದತ್ತಿಯ ಮೂಲಧನಕ್ಕೆ ಕ್ರೋಢೀಕೃತವಾಗುವ ಬಡ್ಡಿಯ ಹಣದಲ್ಲಿ ಶೇ.20 ರಷ್ಟನ್ನು ದತ್ತಿಯ ಮೂಲ ಧನಕ್ಕೆ ಸೇರಿಸಿ, ಉಳಿದ ಶೇ. 80ರಷ್ಟು ಹಣವನ್ನು ವಿಭಾಗದಲ್ಲಿ ಉಪನ್ಯಾಸ ಕಾರ್ಯಕ್ರಮವನ್ನು ಕೆಳಕಂಡ ಷರತ್ತುಗಳೊಂದಿಗೆ ಏರ್ಪಡಿಸಬೇಕೆಂದು ಅನುಮತಿ ಕೋರಿರುತ್ತಾರೆ.<br>ಷರತ್ತುಗಳು:<br>1. 80% of the Interest accrued on the Endowment shall be utilized for arranging "Prof. Y.S.Siddegowda Endowment Lecture" annually.<br>2. The 20% interest accrued on the endowment shall be added to the corpus of the fund.<br>3. If the said Lecture is not arranged in any year for any reason, the interest shall be added to the Corpus of the Fund.<br>4. The expenditure on travel, honorarium and miscellaneous items may be limited to the interest accrued on endowment corpus fund.<br>5. The University Syndicate shall have the power to make suitable changes in the original conditions of the award without detriment to the object of the Donor. |

| | |
|---|---|
| | ಮೇಲಿನ ಉಪನ್ಯಾಸ ದತ್ತಿ ಸ್ಥಾಪನೆ ಮಾಡುವ ಸಂಬಂಧ ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಕಾಯ್ದೆ 2000ರ ಪ್ರಕರಣ 31 (2) (IX) ಪ್ರಕಾರ ದಿನಾಂಕ 18-06-2020 ರಂದು ನಡೆದ ಶಿಕ್ಷಣ ಮಂಡಳ ಸಭೆಯು ಪ್ರಸ್ತಾವನೆಯನ್ನು ಅನುಮೋದಿಸಿರುತ್ತದೆ. |
| ತೀರ್ಮಾನ | ಪ್ರೊ.ವೈ.ಎಸ್.ಸಿದ್ದೇಗೌಡ ರವರ ಹೆಸರಿನಲ್ಲಿ ದತ್ತಿ ಉಪನ್ಯಾಸ ಸ್ಥಾಪನೆ ಮಾಡುವ ಪ್ರಸ್ತಾವನೆಯನ್ನು ಸಿಂಡಿಕೇಟ್ ಸಭೆಯು ಅನುಮೋದಿಸಿತು. |
| 2020/8.3 | ಜೀವರಸಾಯನಶಾಸ್ತ್ರ ಅಧ್ಯಯನ ವಿಭಾಗ, ಮಾಲಿಕ್ಯುಲರ್ ಬಯಾಲಜಿ ಅಧ್ಯಯನ ವಿಭಾಗ, ರಾಜ್ಯಶಾಸ್ತ್ರ ಅಧ್ಯಯನ ವಿಭಾಗ ಮತ್ತು ಕ್ರಿಶ್ಚಿಯಾನಿಟಿ ಅಧ್ಯಯನ ವಿಭಾಗಗಳಿಗೆ ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಕಾಯ್ದೆ 2000 ಪ್ರಕರಣ 34(7)ರ ರೀತ್ಯಾ ವಿಭಾಗದ ಅಧ್ಯಕ್ಷರುಗಳನ್ನು ನೇಮಕ ಮಾಡಿರುವ ಬಗ್ಗೆ ಐದನೇ ಸಿಂಡಿಕೇಟಿನ ಸಭೆಯ ಅನುಸಮರ್ಥನೆಗಾಗಿ: |
| | ಪ್ರೊ.ಬಿ.ಎಸ್.ವಿಶ್ವನಾಥ್, ಪ್ರಾಧ್ಯಾಪಕರು, ಜೀವರಸಾಯನಶಾಸ್ತ್ರ ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಮೈಸೂರು ಇವರು ದಿನಾಂಕ 23-10-2018ರಿಂದ ಅನ್ವಯವಾಗುವಂತೆ ಎರಡು ವರ್ಷಗಳ ಅವಧಿಗೆ ವಿಭಾಗದ ಅಧ್ಯಕ್ಷರನ್ನಾಗಿ ನೇಮಕ ಮಾಡಲಾಗಿತ್ತು. ಆದರೆ ಇವರು ದಿನಾಂಕ 22-7-2020ರಂದು ಸೇವೆಯಿಂದ ವಯೋ ನಿವೃತ್ತರಾಗಿರುತ್ತಾರೆ ಹಾಗೂ ಇವರ ವಿಭಾಗದ ಅಧ್ಯಕ್ಷರ ಅವಧಿಯು ಅಂದೇ ಅಂತ್ಯಗೊಂಡಿರುತ್ತದೆ. ಆದ್ದರಿಂದ, ವಿಭಾಗದ ಪ್ರಾಧ್ಯಾಪಕರುಗಳ ಜೇಷ್ಠತೆಯಲ್ಲಿ ಹಿರಿಯರಾಗಿರುವ ಪ್ರೊ.ಕೆ.ಕೆಂಪರಾಜು, ಪ್ರಾಧ್ಯಾಪಕರು, ಇವರನ್ನು ಮುಂದಿನ ಎರಡು ವರ್ಷಗಳ ಅವಧಿಗೆ ಅಥವಾ ಮುಂದಿನ ಆದೇಶದವರೆಗೆ ದಿನಾಂಕ: 22-07-2020ರಿಂದ ಅನ್ವಯವಾಗುವಂತೆ ಜೀವರಸಾಯನಶಾಸ್ತ್ರ ವಿಭಾಗದ ಅಧ್ಯಕ್ಷರನ್ನಾಗಿ ನೇಮಕ ಮಾಡಿ ಆದೇಶವನ್ನು ನೀಡಲಾಗಿದೆ.<br><br>ಪ್ರೊ. ಕೆ. ಕೆಂಪರಾಜು, ಇವರಿಂದ ತೆರವಾದ ಮಾಲಿಕ್ಯುಲರ್ ಬಯಾಲಜಿ ಅಧ್ಯಯನ ವಿಭಾಗದ ಅಧ್ಯಕ್ಷರ ಹುದ್ದೆಗೆ ಇವರ ನಂತರ ಜ್ಯೇಷ್ಠತೆಯಲ್ಲಿ ಹಿರಿಯ ಪ್ರಾಧ್ಯಾಪಕರಾದ ಡಾ.ಗೋಪಾಲಮರಾಠೆ ಕೆ, ಪ್ರಾಧ್ಯಾಪಕರು, ಜೀವರಸಾಯನಶಾಸ್ತ್ರ ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಮೈಸೂರು ಇವರನ್ನು ದಿನಾಂಕ 10-08-2020 ರಿಂದ ಅನ್ವಯವಾಗುವಂತೆ ಎರಡು ವರ್ಷಗಳ ಅವಧಿಗೆ ಅಥವಾ ಮುಂದಿನ ಆದೇಶದವರೆಗೆ ಮಾಲಿಕ್ಯುಲರ್ ಬಯಾಲಜಿ ಅಧ್ಯಯನ ವಿಭಾಗದ ಅಧ್ಯಕ್ಷರನ್ನಾಗಿ ನೇಮಕ ಮಾಡಲಾಗಿದೆ.<br><br>ರಾಜ್ಯಶಾಸ್ತ್ರ ಅಧ್ಯಯನ ವಿಭಾಗದ ಅಧ್ಯಕ್ಷರಾಗಿದ್ದ ಪ್ರೊ. ಕೃಷ್ಣ ಆರ್ ಹೊಂಬಾಳ್ ಇವರ ಅಧ್ಯಕ್ಷರ ಎರಡು ವರ್ಷಗಳ ಅವಧಿಯು ದಿನಾಂಕ:30-08-2018 ರಿಂದ 29-08-2020 ಮುಕ್ತಾಯಗೊಂಡಿರುತ್ತದೆ. ರಾಜ್ಯಶಾಸ್ತ್ರ ಅಧ್ಯಯನ ವಿಭಾಗದ ಪ್ರಾಧ್ಯಾಪಕರುಗಳ ಜ್ಯೇಷ್ಠತಾ ಪಟ್ಟಿಯಲ್ಲಿ ಹಿರಿಯರಾಗಿರುವ ಪ್ರೊ. ಮುಜಾಫರ್ ಹೆಚ್ ಅಸ್ಸಾದಿ, ಪ್ರಾಧ್ಯಾಪಕರು, ರಾಜ್ಯಶಾಸ್ತ್ರ ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಮೈಸೂರು ಇವರನ್ನು ದಿನಾಂಕ 29-08-2020ರ ಅಪರಾಹ್ನದಿಂದ (ದಿನಾಂಕ:30-08-2020ರಂದು ಸರ್ಕಾರಿ ರಜೆಯಿರುವುದರಿಂದ) ಅನ್ವಯವಾಗುವಂತೆ ಎರಡು ವರ್ಷಗಳ ಅವಧಿಗೆ ಅಥವಾ ಮುಂದಿನ ಆದೇಶದವರೆಗೆ ವಿಭಾಗದ ಅಧ್ಯಕ್ಷರನ್ನಾಗಿ ನೇಮಕ ಮಾಡಲಾಗಿದೆ.<br><br>ಕ್ರಿಶ್ಚಿಯಾನಿಟಿ ಅಧ್ಯಯನ ವಿಭಾಗದ ಹಾಲಿ ಅಧ್ಯಕ್ಷರಾಗಿರುವ ಡಾ.ವಾಲೆಂಡಿನ್ ರಾಜೇಂದ್ರಕುಮಾರ್, ಸಹಾಯಕ ಪ್ರಾಧ್ಯಾಪಕರು, ಇವರ ವಿಭಾಗದ ಅಧ್ಯಕ್ಷರ ಅವಧಿಯು ದಿನಾಂಕ 29-08-2020ಕ್ಕೆ ಮುಕ್ತಾಯಗೊಳ್ಳುತ್ತಿದ್ದು, ಈ ವಿಭಾಗದಲ್ಲಿ ಯಾರೂ ಖಾಯಂ ಪ್ರಾಧ್ಯಾಪಕರಾಗಲೀ/ಸಹ ಪ್ರಾಧ್ಯಾಪಕರಾಗಲೀ/ಸಹಾಯಕ ಪ್ರಾಧ್ಯಾಪಕರಾಗಲೀ ಇಲ್ಲದಿರುವುದರಿಂದ, ಇವರನ್ನೇ ಮತ್ತೊಂದು ಅವಧಿಗೆ ಅಂದರೆ, ದಿ.30-08-2020ರಿಂದ ಅನ್ವಯವಾಗುವಂತೆ ಎರಡು ವರ್ಷಗಳ ಅವಧಿಗೆ ಅಥವಾ ಮುಂದಿನ ಆದೇಶದವರೆಗೆ ವಿಭಾಗದ ಅಧ್ಯಕ್ಷರಾಗಿ ಮುಂದುವರಿಸಲಾಗಿದೆ. |

| | |
|---|---|
| ತೀರ್ಮಾನ | ಜೀವರಸಾಯನಶಾಸ್ತ್ರ ಅಧ್ಯಯನ ವಿಭಾಗ, ಮಾಲಿಕ್ಯುಲರ್ ಬಯಾಲಜಿ ಅಧ್ಯಯನ ವಿಭಾಗ, ರಾಜ್ಯಶಾಸ್ತ್ರ ಅಧ್ಯಯನ ವಿಭಾಗ ಮತ್ತು ಕ್ರಿಶ್ಚಿಯಾನಿಟಿ ಅಧ್ಯಯನ ವಿಭಾಗಗಳಿಗೆ ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಕಾಯ್ದೆ 2000 ಪ್ರಕರಣ 34(7)ರ ರೀತ್ಯಾ ವಿಭಾಗದ ಅಧ್ಯಕ್ಷರುಗಳನ್ನು ನೇಮಕ ಮಾಡಿರುವ ಬಗ್ಗೆ ಸಿಂಡಿಕೇಟ್‌ಸಭೆಯು ಅನುಸಮರ್ಥಿಸಿತು. |
| 2020/8.4 | ಸ್ನಾತಕೋತ್ತರ ಕೇಂದ್ರ, ಹೇಮಗಂಗೋತ್ರಿ, ಹಾಸನ ಇಲ್ಲಿಯ ನಿರ್ದೇಶಕರನ್ನಾಗಿ ಡಾ. ಶರಣಪ್ಪ, ಪ್ರಾಧ್ಯಾಪಕರು, ಬಯೋ-ಸೈನ್ಸ್ ಅಧ್ಯಯನ ವಿಭಾಗ, ಇವರನ್ನು ನೇಮಕ ಮಾಡಿರುವ ಬಗ್ಗೆ ಐದನೇ ಸಿಂಡಿಕೇಟಿನ ಸಾಮಾನ್ಯ ಸಭೆಯ ಅನುಸಮರ್ಥನೆಗಾಗಿ ಮಂಡಿಸಲಾಗಿದೆ. |
| ತೀರ್ಮಾನ | ಸ್ನಾತಕೋತ್ತರ ಕೇಂದ್ರ, ಹೇಮಗಂಗೋತ್ರಿ, ಹಾಸನ ಇಲ್ಲಿಯ ನಿರ್ದೇಶಕರಾದ ಡಾ.ಎಂ.ಶಂಕರ್, ಪ್ರಾಧ್ಯಾಪಕರು, ಕನ್ನಡ ವಿಭಾಗ, ಸ್ನಾತಕೋತ್ತರ ಕೇಂದ್ರ, ಹಾಸನ ಇವರ ಎರಡು ವರ್ಷಗಳ ನಿರ್ದೇಶಕರ ಅವಧಿಯು ದಿನಾಂಕ: 07-07-2020ಕ್ಕೆ ಮುಕ್ತಾಯಗೊಂಡಿರುತ್ತದೆ. ಇವರ ನಂತರ ಹಾಸನ ಸ್ನಾತಕೋತ್ತರ ಕೇಂದ್ರದ ಪ್ರಾಧ್ಯಾಪಕರುಗಳ ಜ್ಯೇಷ್ಠತಾ ಪಟ್ಟಿಯಲ್ಲಿ ಡಾ. ಶರಣಪ್ಪ, ಪ್ರಾಧ್ಯಾಪಕರು, ಬಯೋ-ಸೈನ್ಸ್ ಅಧ್ಯಯನ ವಿಭಾಗ, ಸ್ನಾತಕೋತ್ತರ ಕೇಂದ್ರ ಹೇಮಗಂಗೋತ್ರಿ, ಹಾಸನ, ಇವರು ಸೇವಾ ಹಿರಿತನ ಹೊಂದಿರುತ್ತಾರೆ.<br><br>ಡಾ. ಶರಣಪ್ಪ, ಪ್ರಾಧ್ಯಾಪಕರು, ಬಯೋ-ಸೈನ್ಸ್ ಅಧ್ಯಯನ ವಿಭಾಗ, ಸ್ನಾತಕೋತ್ತರ ಕೇಂದ್ರ ಹೇಮಗಂಗೋತ್ರಿ, ಹಾಸನಇವರನ್ನು ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಕಾಯ್ದೆ 2000 ಪ್ರಕರಣ 34 (7)ರ ರೀತ್ಯಾ ಸ್ನಾತಕೋತ್ತರ ಕೇಂದ್ರ, ಹೇಮಗಂಗೋತ್ರಿ, ಹಾಸನ ಇಲ್ಲಿಗೆ ನಿರ್ದೇಶಕರನ್ನಾಗಿ ನೇಮಕ ಮಾಡಿರುವುದನ್ನು ಸಿಂಡಿಕೇಟ್ ಸಭೆಯು ಅನುಸಮರ್ಥಿಸಿತು. |
| 2020/8.5 | ಮರಿಯನ್ ಇನ್ಸ್ಟಿಟ್ಯೂಟ್ ಆಫ್ ಪ್ರೊಫೆಷನಲ್ ಸ್ಟಡೀಸ್, ಎಂ.ಐ.ಟಿ. ಕ್ಯಾಂಪಸ್, ಮಂಡ್ಯ ಜಿಲ್ಲೆ ಇವರ ಸಂಸ್ಥೆಗೆ ವಿಶ್ವವಿದ್ಯಾನಿಲಯದ ಸ್ಪೆಷಲೈಸ್ಡ್ ಪ್ರೋಗ್ರಾಮ್ ಅಡಿಯಲ್ಲಿ ಹೊಸದಾಗಿ ಕೋರ್ಸುಗಳನ್ನು ಪ್ರಾರಂಭಿಸಲು ವಿಶ್ವವಿದ್ಯಾನಿಲಯದ ಮಾನ್ಯತೆ ನೀಡುವ ಸಂಬಂಧ ಪರಿವೀಕ್ಷಣಾ ಸಮಿತಿಯು ಸಲ್ಲಿಸಿರುವ ವರದಿಗೆ ಅನುಮೋದನೆ ಕೋರುವ ಬಗ್ಗೆ. |
| | ಮರಿಯನ್ ಇನ್ಸ್ಟಿಟ್ಯೂಟ್ ಆಫ್ ಪ್ರೊಫೆಷನಲ್ ಸ್ಟಡೀಸ್, ಎಂ.ಐ.ಟಿ. ಕ್ಯಾಂಪಸ್, ಮಂಡ್ಯ ಜಿಲ್ಲೆ ಇವರ ಸಂಸ್ಥೆಗೆ ವಿಶ್ವವಿದ್ಯಾನಿಲಯದ ಸ್ಪೆಷಲೈಸ್ಡ್ ಪ್ರೋಗ್ರಾಮ್ ಅಡಿಯಲ್ಲಿ 1) BBA (Catering & Hotel Management) 2) B.Sc. (Animation & VFX) 3) B.B.A (Interior Design) ಹೊಸದಾಗಿ ಕೋರ್ಸುಗಳನ್ನು ಪ್ರಾರಂಭಿಸಲು ವಿಶ್ವವಿದ್ಯಾನಿಲಯದ ಮಾನ್ಯತೆ ನೀಡುವ ಸಂಬಂಧ ಪರಿವೀಕ್ಷಣಾ ಸಮಿತಿಯು ದಿನಾಂಕ 29-7-2020ರಂದು ಕಾಲೇಜಿನ ಮೂಲಭೂತ ಸೌಲಭ್ಯ ಮತ್ತು ಇತರೆ ಮಾಹಿತಿಗಳನ್ನು Digital Mode (Online Video)ಮುಖಾಂತರ ಪರಿಶೀಲಿಸಿ ಕೆಳಕಂಡಂತೆ ಶಿಫಾರಸ್ಸು ಮಾಡಿರುತ್ತದೆ.<br><br>"The expert committee recommends that, the Marian Institute of Professional Studies, MIT Campus, K.R.Mills, Belwadi, Srirangapatna, Mandya District for commencement of 1) BBA (Catering & Hotel Management) 2) B.Sc. (Animation & VFX) 3) BBA (Interior Design) with and intake of forty (40) for each subject under the provision of "The University of Mysore- Recognition of certain Institutions for Specified/Specialized and Research Statute 2008" from the academic year 2020-21. |

| | |
|---|---|
| ತೀರ್ಮಾನ | ಪರಿವೀಕ್ಷಣಾ ಸಮಿತಿಯು ಸಲ್ಲಿಸಿರುವ ವರದಿಯನ್ನು ಪರಿಶೀಲಿಸಿದ ಸಿಂಡಿಕೇಟ್‌ಮರಿಯನ್ ಇನ್ಸ್ಟಿಟ್ಯೂಟ್ ಆಫ್ ಪ್ರೊಫೆಷನಲ್ ಸ್ಟಡೀಸ್, ಎಂ.ಐ.ಟಿ. ಕ್ಯಾಂಪಸ್, ಮಂಡ್ಯ ಜಿಲ್ಲೆ ಇವರ ಸಂಸ್ಥೆಗೆ ವಿಶ್ವವಿದ್ಯಾನಿಲಯದ ಸ್ಪೆಷಲೈಸ್ಡ್ ಪ್ರೋಗ್ರಾಮ್ ಅಡಿಯಲ್ಲಿ 1) BBA (Catering & Hotel Management) 2) B.Sc. (Animation & VFX) and 3) B.B.A (Interior Design) ಹೊಸದಾಗಿ ಕೋರ್ಸುಗಳನ್ನು ಪ್ರಾರಂಭಿಸಲುಅನುಮೋದಿಸಿತು. |
| 2020/8.6 | ಶೈಕ್ಷಣಿಕ ಮತ್ತು ಸಮಾಜವಿಜ್ಞಾನ ವಿಷಯಗಳಲ್ಲಿ ಸಂಶೋಧನೆಯನ್ನು ಕೈಗೊಳ್ಳಲು ಹಾಗೂ ವಿದ್ಯಾರ್ಥಿ ವಿನಿಮಯ ಕಾರ್ಯಕ್ರಮದ ಬಗ್ಗೆ ಮೈಸೂರು ವಿಶ್ವವಿದ್ಯಾನಿಲಯದೊಡನೆ The Institute for Social and Economic Change (ISEC), ಬೆಂಗಳೂರು ಅವರು ಮಾಡಿಕೊಂಡಿರುವ ಒಡಂಬಡಿಕೆಯನ್ನು ಮಾರ್ಪಡಿಸಿ, ನವೀಕರಿಸಲು ಕೋರಿರುವ ಬಗ್ಗೆ. |
| ತೀರ್ಮಾನ | ಮೈಸೂರು ವಿಶ್ವವಿದ್ಯಾನಿಲಯದೊಡನೆ The Institute for Social and Economic Change (ISEC), ಬೆಂಗಳೂರು ಸಂಸ್ಥೆಯು ಶೈಕ್ಷಣಿಕ ಮತ್ತು ಸಮಾಜ ವಿಜ್ಞಾನ ವಿಷಯಗಳಲ್ಲಿ ಸಂಶೋಧನೆಯನ್ನು ಕೈಗೊಳ್ಳಲು ಹಾಗೂ ವಿದ್ಯಾರ್ಥಿ ವಿನಿಮಯ ಕಾರ್ಯಕ್ರಮದ ಬಗ್ಗೆ 07-02-2017ರಲ್ಲಿ ದಿನಾಂಕ 25-04-2017ರ ಸಿಂಡಿಕೇಟ್ ತೀರ್ಮಾನದನುಸಾರ ಮಾಡಿಕೊಂಡಿರುವ ಒಡಂಬಡಿಕೆಯಲ್ಲಿನ ಅಂಶಗಳನ್ನು 2012ರಲ್ಲಿ ಮಾಡಿಕೊಂಡಿದ್ದ ಒಡಂಬಡಿಕೆಯಂತೆ ಪುನಃ ಯಥಾವತ್ತಾಗಿ ತಿದ್ದುಪಡಿ ಮಾರ್ಪಾಡುಗಳೊಡನೆ 2017ರಿಂದ ಐದು ವರ್ಷಗಳ ಅವಧಿಗೆ ನವೀಕರಣ ಒಡಂಬಡಿಕೆ ಮಾಡಿಕೊಳ್ಳಲು ಕೋರಿರುವ ಪ್ರಸ್ತಾವನೆಯನ್ನು ಸಿಂಡಿಕೇಟ್ ಅನುಮೋದಿಸಿತು. |
| 2020/8.7 | ಪ್ಲಾನಿಂಗ್ ಕಮಿಷನ್ ಪೀಠಕ್ಕೆ ಸಂದರ್ಶಕ ಪ್ರಾಧ್ಯಾಪಕರನ್ನು ಆಹ್ವಾನಿಸುವ ಬಗೆಗೆ. |
| | ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಸ್ಥಾಪಿಸಲಾಗಿರುವ ಪ್ಲಾನಿಂಗ್ ಕಮಿಷನ್ ಪೀಠದಲ್ಲಿ ಸಂದರ್ಶಕ ಪ್ರಾಧ್ಯಾಪಕರಾಗಿ ಕಾರ್ಯನಿರ್ವಹಿಸುತ್ತಿದ್ದ ಪ್ರೊ.ಮಂಜಪ್ಪಡಿ ಹೊಸಮನೆ ಇವರ ನೇಮಕಾತಿ ಅವಧಿಯು ದಿನಾಂಕ: 09-07-2020 ರಂದು ಪೂರ್ಣಗೊಂಡಿರುತ್ತದೆ. ಅಧ್ಯಕ್ಷರು, ಅರ್ಥಶಾಸ್ತ್ರ ಮತ್ತು ಸಹಕಾರ ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಮೈಸೂರು ಇವರು ಮುಂಬರುವ ಶೈಕ್ಷಣಿಕ ವರ್ಷಕ್ಕೆ ಪ್ಲಾನಿಂಗ್ ಕಮಿಷನ್ ಪೀಠಕ್ಕೆ ಸಂದರ್ಶಕ ಪ್ರಾಧ್ಯಾಪಕರನ್ನು ಆಹ್ವಾನಿಸುವ ಬಗ್ಗೆ ದಿನಾಂಕ: 12-06-2020 ರಂದು ನಡೆದ ವಿಭಾಗೀಯ ಪರಿಷತ್‌ನಲ್ಲಿ ಪ್ರೊ. ಮಂಜಪ್ಪ ಡಿ ಹೊಸಮನೆ ಅವರ ಪ್ರಗತಿ ವರದಿಯ ಆಧಾರದ ಮೇಲೆ ಮತ್ತೊಂದು ವರ್ಷದ ಅವಧಿಗೆ ಮುಂದುವರೆಸುವ ಬಗ್ಗೆ ಅಧಿನಿಯಮದಲ್ಲಿ ಅವಕಾಶವಿರುವುದರಿಂದ, ಪ್ರೊ. ಮಂಜಪ್ಪ ಡಿ ಹೊಸಮನೆ ಅವರನ್ನು ಮತ್ತೊಂದು ವರ್ಷಕ್ಕೆ ಸಂದರ್ಶಕ ಪ್ರಾಧ್ಯಾಪಕರಾಗಿ ಮುಂದುವರೆಸಬೇಕೆಂದು ಕೋರಿರುತ್ತಾರೆ. |
| ತೀರ್ಮಾನ | ಪ್ಲಾನಿಂಗ್ ಕಮಿಷನ್ ಪೀಠಕ್ಕೆ ಪ್ರೊ.ಮಂಜಪ್ಪಡಿ ಹೊಸಮನೆ ಇವರನ್ನು ಮಾಹೆಯಾನ ರೂ.10,000/-ಗಳ ಗೌರವಧನದೊಂದಿಗೆ ಒಂದು ವರ್ಷ ಸಂದರ್ಶಕ ಪ್ರಾಧ್ಯಾಪಕರನ್ನಾಗಿಮುಂದುವರೆಸಲು ಸಿಂಡಿಕೇಟ್ ಸಭೆಯು ಅನುಮೋದಿಸಿತು. |
| 2020/8.8 | ಸ್ಟೇಟ್ ಬ್ಯಾಂಕ್ ಆಫ್ ಮೈಸೂರು ಪೀಠಕ್ಕೆ ಸಂದರ್ಶಕ ಪ್ರಾಧ್ಯಾಪಕರನ್ನು ಆಹ್ವಾನಿಸುವ ಬಗೆಗೆ |
| | ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಸ್ಥಾಪಿಸಲಾಗಿರುವ ಸ್ಟೇಟ್ ಬ್ಯಾಂಕ್ ಆಫ್ ಮೈಸೂರು ಪೀಠದಲ್ಲಿ ಸಂದರ್ಶಕ ಪ್ರಾಧ್ಯಾಪಕರಾಗಿ ಕಾರ್ಯನಿರ್ವಹಿಸುತ್ತಿದ್ದ ಪ್ರೊ.ಟಿ.ಆರ್.ಮಂಜುನಾಥ ಇವರ ನೇಮಕಾತಿ ಅವಧಿಯು ದಿನಾಂಕ: 14-07-2020ರಂದು ಪೂರ್ಣಗೊಂಡಿರುತ್ತದೆ. ಅಧ್ಯಕ್ಷರು, ಅರ್ಥಶಾಸ್ತ್ರ ಮತ್ತು ಸಹಕಾರ ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಮೈಸೂರು ಇವರು ಮುಂಬರುವ ಶೈಕ್ಷಣಿಕ ವರ್ಷಕ್ಕೆ ಸಂದರ್ಶಕ ಪ್ರಾಧ್ಯಾಪಕರನ್ನು ಆಹ್ವಾನಿಸುವ ಬಗ್ಗೆ ದಿನಾಂಕ: 12-06-2020 ರಂದು ನಡೆದ ವಿಭಾಗೀಯ ಪರಿಷತ್‌ನಲ್ಲಿ |

| | |
|---|---|
| | ಪ್ರೊ.ಟಿ.ಆರ್.ಮಂಜುನಾಥ ಅವರನ್ನು ಸ್ಟೇಟ್ ಬ್ಯಾಂಕ್ ಆಫ್ ಮೈಸೂರು ಪೀಠದ ಅಧಿನಿಯಮದ ಕಂಡಿಕೆ VII (1) ಮತ್ತು (2)ರ ಅನ್ವಯ ಪ್ರೊ. ಟಿ. ಆರ್. ಮಂಜುನಾಥ ಅವರ ಪ್ರಗತಿ ವರದಿಯ ಆಧಾರದ ಮೇಲೆ ಮತ್ತೊಂದು ವರ್ಷದ ಅವಧಿಗೆ ಮುಂದುವರೆಸುವ ಬಗ್ಗೆ ಅಧಿನಿಯಮದಲ್ಲಿ ಅವಕಾಶವಿರುವುದರಿಂದ ಪ್ರೊ.ಟಿ.ಆರ್.ಮಂಜುನಾಥ ಅವರನ್ನು ಮತ್ತೊಂದು ವರ್ಷಕ್ಕೆ ಸಂದರ್ಶಕ ಪ್ರಾಧ್ಯಾಪಕರಾಗಿ ಮುಂದುವರೆಸಬೇಕೆಂದು ಕೋರಿರುತ್ತಾರೆ. |
| ತೀರ್ಮಾನ | ಸ್ಟೇಟ್ ಬ್ಯಾಂಕ್ ಆಫ್ಲ್ ಮೈಸೂರು ಪೀಠಕ್ಕೆ ಪ್ರೊ.ಟಿ.ಆರ್.ಮಂಜುನಾಥ ಇವರನ್ನು ಮಾಹೆಯಾನ ರೂ. 10,000/-ಗಳ ಗೌರವಧನದೊಂದಿಗೆ ಒಂದು ವರ್ಷ ಸಂದರ್ಶಕ ಪ್ರಾಧ್ಯಾಪಕರಾಗಿ ಮುಂದುವರೆಸಲು ಸಿಂಡಿಕೇಟ್ ಸಭೆಯು ಅನುಮೋದಿಸಿತು. |
| 2020/8.9 | ಡಾ. ಬಿ.ಆರ್. ಅಂಬೇಡ್ಕರ್ ಪೀಠಕ್ಕೆ ಸಂದರ್ಶಕ ಪ್ರಾಧ್ಯಾಪಕರನ್ನು ನೇಮಕ ಮಾಡುವ ಬಗೆಗೆ. |
| | ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಡಾ.ಬಿ.ಆರ್.ಅಂಬೇಡ್ಕರ್ ಪೀಠದಲ್ಲಿ ಸಂದರ್ಶಕ ಪ್ರಾಧ್ಯಾಪಕರಾಗಿ ಕಾರ್ಯನಿರ್ವಹಿಸುತ್ತಿದ್ದ ಶ್ರೀ ಬಸವರಾಜ ದೇವನೂರ ಇವರ ನೇಮಕಾತಿ ಅವಧಿಯು ಪೂರ್ಣಗೊಂಡಿರುತ್ತದೆ. ನಿರ್ದೇಶಕರು, ಡಾ.ಬಿ.ಆರ್.ಅಂಬೇಡ್ಕರ್ ಸಂಶೋಧನ ಹಾಗೂ ವಿಸ್ತರಣ ಕೇಂದ್ರ, ಮಾನಸಗಂಗೋತ್ರಿ, ಮೈಸೂರು ಇವರು ಮುಂಬರುವ ಶೈಕ್ಷಣಿಕ ವರ್ಷಕ್ಕೆ ಸಂದರ್ಶಕ ಪ್ರಾಧ್ಯಾಪಕರನ್ನು ನೇಮಿಸಲು ವಿಭಾಗೀಯ ಪರಿಷತ್‌ನಲ್ಲಿ ಶಿಫಾರಸ್ಸು ಮಾಡಿ ತಜ್ಞರ ಪಟ್ಟಿ ಹಾಗೂ ಸ್ವವಿವರಗಳನ್ನು ಕಳುಹಿಸಿಕೊಡುವಂತೆ ಕೋರಿರುತ್ತಾರೆ.ಈ ಸಂಬಂಧ 03 ತಜ್ಞರು ಸ್ವವಿವರಗಳನ್ನು ಸಲ್ಲಿಸಿರುತ್ತಾರೆ. ತಜ್ಞರ ಪಟ್ಟಿ ಹಾಗೂ ಸ್ವವಿವರಗಳನ್ನು ಪರಿಶೀಲಿಸಿದ ನಿರ್ದೇಶಕರು ಡಾ. ಬಿ.ಆರ್.ಅಂಬೇಡ್ಕರ್ ಪೀಠದ ಅಧಿನಿಯಮದ ಕಂಡಿಕೆ 9 ರ (IV) ರಿಂದ (VIII) ರನ್ವಯಶ್ರೀ. ಬಸವರಾಜ ದೇವನೂರ ಅವರನ್ನು ಡಾ.ಬಿ.ಆರ್.ಅಂಬೇಡ್ಕರ್ ಪೀಠಕ್ಕೆ ಸಂದರ್ಶಕ ಪ್ರಾಧ್ಯಾಪಕರನ್ನಾಗಿಮತ್ತೊಮ್ಮೆ ಪರಿಗಣಿಸಬೇಕೆಂದು ಕೋರಿರುತ್ತಾರೆ. |
| ತೀರ್ಮಾನ | ಡಾ. ಬಿ.ಆರ್. ಅಂಬೇಡ್ಕರ್ ಪೀಠಕ್ಕೆ ಶ್ರೀ ಬಸವರಾಜ ದೇವನೂರ ಅವರನ್ನು ಒಂದು ವರ್ಷ ಸಂದರ್ಶಕ ಪ್ರಾಧ್ಯಾಪಕರಾಗಿ ಮುಂದುವರೆಸಲು ಸಿಂಡಿಕೇಟ್ ಸಭೆಯು ಅನುಮೋದಿಸಿತು. |
| 2020/8.10 | ಮೈಸೂರು ವಿಶ್ವವಿದ್ಯಾನಿಲಯದ ದೂರ ಶಿಕ್ಷಣದಲ್ಲಿ ಜರುಗುವ ಸ್ನಾತಕ ಹಾಗೂ ಸ್ನಾತಕೋತ್ತರ ಪದವಿ ಕೋರ್ಸುಗಳಿಗೆ 2018-19ನೇ ಶೈಕ್ಷಣಿಕ ಸಾಲಿಗೆ ನಿಗಧಿಪಡಿಸಿದ ಪ್ರವೇಶಾತಿ ಶುಲ್ಕವನ್ನು ಪರೀಕ್ಷಾ ಶುಲ್ಕ ಒಳಗೊಂಡಂತೆ 2019-20ನೇ ಶೈಕ್ಷಣಿಕ ಸಾಲಿನಲ್ಲಿ ಮಾನ್ಯ ಕುಲಪತಿಗಳ ಅನುಮೋದನೆ ಮೇರೆಗೆ ಪರಿಷ್ಕರಿಸಲಾಗಿರುತ್ತದೆ. ಪ್ರವೇಶಾತಿಯು ತುರ್ತಾಗಿ ನಡೆಯಬೇಕಾಗಿರುವುದರಿಂದ ಸಿಂಡಿಕೇಟ್ ಸಭೆಯ ಅನುಮೋದನೆ ಹಾಗೂ ಶುಲ್ಕ ಸಮಿತಿಯ ಅನುಮೋದನೆಯನ್ನು ಕಾಯ್ದಿರಿಸಿ 2019-20ನೇ ಶೈಕ್ಷಣಿಕ ಸಾಲಿನ ವಿದ್ಯಾರ್ಥಿಗಳಿಂದ ಪರಿಷ್ಕೃತ ಶುಲ್ಕವನ್ನು ಪಡೆಯಲಾಗಿರುವ ಬಗ್ಗೆ ಸಿಂಡಿಕೇಟ್ ಸಭೆಯ ಅನುಸಮರ್ಥನೆಗಾಗಿ. |
| **ತೀರ್ಮಾನ** | ಮೈಸೂರು ವಿಶ್ವವಿದ್ಯಾನಿಲಯದ ದೂರ ಶಿಕ್ಷಣದಲ್ಲಿರುವ ಸ್ನಾತಕ ಹಾಗೂ ಸ್ನಾತಕೋತ್ತರ ಪದವಿ ಕೋರ್ಸುಗಳಿಗೆ 2018-19ನೇ ಶೈಕ್ಷಣಿಕ ಸಾಲಿಗೆ ನಿಗಧಿಪಡಿಸಿದ ಪ್ರವೇಶಾತಿ ಶುಲ್ಕ ಹಾಗೂ ಪರೀಕ್ಷಾ ಶುಲ್ಕಗಳನ್ನು 2019-20ನೇ ಶೈಕ್ಷಣಿಕ ಸಾಲಿನಿಂದ ಪರಿಷ್ಕರಿಸಿದ್ದು, ಶುಲ್ಕ ಸಮಿತಿಯ ಅನುಮೋದನೆಯನ್ನು ಕಾಯ್ದಿರಿಸಿ ಈ ಪರಿಷ್ಕೃತ ಶುಲ್ಕವನ್ನು 2019-20ನೇ ಶೈಕ್ಷಣಿಕ ಸಾಲಿನ ವಿದ್ಯಾರ್ಥಿಗಳಿಂದ ಪಾವತಿಸಿಕೊಂಡಿರುವುದನ್ನು ಸಿಂಡಿಕೇಟ್ ಸಭೆಯು ಅನುಸಮರ್ಥಿಸಿತು. |

| | |
|---|---|
| 2020/8.11 | ಶಾಸ್ತ್ರೀಯ ಕನ್ನಡ ಅತ್ಯುನ್ನತ ಅಧ್ಯಯನ ಕೇಂದ್ರಕ್ಕೆ ಅವಶ್ಯವಿರುವ ಜಾಗವನ್ನು ನೀಡುವ ಬಗ್ಗೆ. |
| ತೀರ್ಮಾನ | ಮಾನ್ಯ ಉಪ ಮುಖ್ಯಮಂತ್ರಿಗಳು (ಉನ್ನತ ಶಿಕ್ಷಣ), ಕರ್ನಾಟಕ ಸರ್ಕಾರ, ಬೆಂಗಳೂರು ಇವರ ಅಧ್ಯಕ್ಷತೆಯಲ್ಲಿ ದಿನಾಂಕ: 05-08-2020ರಂದು ನಡೆದ ಸಭೆಯಲ್ಲಿ ಶಾಸ್ತ್ರೀಯ ಕನ್ನಡ ಅತ್ಯುನ್ನತ ಅಧ್ಯಯನ ಕೇಂದ್ರಕ್ಕೆ ಮೈಸೂರು ವಿಶ್ವವಿದ್ಯಾನಿಲಯದ ಆವರಣದಲ್ಲೇ ಐದು (05) ಎಕರೆ ಬದಲಿ ಜಾಗವನ್ನು ಗುರುತಿಸುವಂತೆ ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ. ಈ ಹಿನ್ನೆಲೆಯಲ್ಲಿ ಪ್ರಸ್ತುತ ಮೈಸೂರು ವಿಶ್ವವಿದ್ಯಾನಿಲಯದ ಮಾನಸಗಂಗೋತ್ರಿ ಆವರಣದಲ್ಲಿರುವ ಪಂಪ್ ಹೌಸ್ ಎದುರಿನಲ್ಲಿರುವ ಜಾಗದಲ್ಲಿ ಅಥವಾ ಸಂಸ್ಕೃತ ಅಧ್ಯಯನ ವಿಭಾಗದ ಹಿಂಭಾಗದಲ್ಲಿ ಒಟ್ಟಾರೆ 4 ಎಕರೆ 02 ಗುಂಟೆ ಜಾಗವನ್ನು ಗುರುತಿಸಿ, ಇದರ 02 ಖಾಲಿ ಜಾಗಗಳ ಸ್ಕೆಚ್ ಪ್ರತಿಗಳನ್ನು ಶ್ರೀ.ಟಿ.ಎಸ್.ನಾಗಾಭರಣ, ಅಧ್ಯಕ್ಷರು, ಕನ್ನಡ ಅಭಿವೃದ್ಧಿ ಪ್ರಾಧಿಕಾರ, ವಿಧಾನಸೌಧ, ಬೆಂಗಳೂರು ಹಾಗೂ ಮಾನ್ಯ ಕನ್ನಡ ಮತ್ತು ಸಂಸ್ಕೃತ ಇಲಾಖಾ ಸಚಿವರು ಹಾಗೂ ಪ್ರೊ.ಡಿ.ಜಿ.ರಾವ್, ನಿರ್ದೇಶಕರು, ಶಾಸ್ತ್ರೀಯ ಕನ್ನಡ ಅತ್ಯುನ್ನತ ಅಧ್ಯಯನ ಕೇಂದ್ರ, ಮೈಸೂರು ಇವರುಗಳೊಂದಿಗೆ ಸಮಾಲೋಚಿಸಿ, ಶಾಸ್ತ್ರೀಯ ಕನ್ನಡ ಅತ್ಯುನ್ನತ ಅಧ್ಯಯನ ಕೇಂದ್ರಕ್ಕೆ ಅವಶ್ಯವಿರುವ ಒಂದು ಜಾಗವನ್ನು ಗುರುತಿಸುವಂತೆ ಪತ್ರ ಬರೆಯಲಾಯಿತು.<br><br>ಈ ಸಂಬಂಧ ಮಾನ್ಯ ಕನ್ನಡ ಮತ್ತು ಸಂಸ್ಕೃತ ಇಲಾಖಾ ಸಚಿವರು ಹಾಗೂ ಪ್ರೊ.ಡಿ.ಜಿ.ರಾವ್, ನಿರ್ದೇಶಕರು, ಶಾಸ್ತ್ರೀಯ ಕನ್ನಡ ಅತ್ಯುನ್ನತ ಅಧ್ಯಯನ ಕೇಂದ್ರ, ಮೈಸೂರು ಇವರುಗಳೊಂದಿಗೆ ಸಮಾಲೋಚಿಸಿ, ಈ ಮೇಲೆ ತಿಳಿಸಿರುವ ಎರಡು ಜಾಗಗಳಲ್ಲಿ ಪಂಪ್‌ಹೌಸ್ ಎದುರಿನಲ್ಲಿರುವ (4 ಎಕರೆ 02 ಗುಂಟೆ) ಜಾಗವನ್ನು ಶಾಸ್ತ್ರೀಯ ಕನ್ನಡ ಅತ್ಯುನ್ನತ ಅಧ್ಯಯನ ಕೇಂದ್ರಕ್ಕೆ ಮೀಸಲಿರಿಸಿ, ಸರ್ಕಾರದ ಅನುಮೋದನೆಗಾಗಿ ಪ್ರಸ್ತಾವನೆ ಸಲ್ಲಿಸುವಂತೆ ತಿಳಿಸಿರುತ್ತಾರೆ.<br><br>ಶಾಸ್ತ್ರೀಯ ಕನ್ನಡ ಅತ್ಯುನ್ನತ ಅಧ್ಯಯನ ಕೇಂದ್ರಕ್ಕೆ ಮೈಸೂರು ವಿಶ್ವವಿದ್ಯಾನಿಲಯದ ಮಾನಸಗಂಗೋತ್ರಿ ಆವರಣದಲ್ಲಿರುವ ಪಂಪ್‌ಹೌಸ್ ಎದುರಿನಲ್ಲಿರುವ (4 ಎಕರೆ 02 ಗುಂಟೆ) ಅವಶ್ಯವಿರುವ ಜಾಗವನ್ನು ಶಾಸ್ತ್ರೀಯ ಕನ್ನಡ ಅತ್ಯುನ್ನತ ಅಧ್ಯಯನ ಕೇಂದ್ರಕ್ಕೆ ಮೀಸಲಿರಿಸಿ, ಸರ್ಕಾರದ ಅನುಮೋದನೆಗಾಗಿ ಪ್ರಸ್ತಾವನೆ ಸಲ್ಲಿಸಲು ಸಿಂಡಿಕೇಟ್ ಸಭೆಯು ಅನುಮೋದಿಸಿತು. |
| 2020/8.12 | ಕೃಷ್ಣಬಾಯಿ ಗುಂಡೋಪಂಥ್ ಚಿನ್ನದ ಪದಕ, ಸುಮತಿ ಶ್ರೀನಿವಾಸನ್ ಚಿನ್ನದ ಪದಕ, ಸುಮಿತ್ರ ಚಿಸ್ಥಿ ಮೆಮೋರಿಯಲ್ ಚಿನ್ನದ ಪದಕ ದತ್ತಿಗಳ ಮೂಲ ಷರತ್ತುಗಳಿಗೆ ತಿದ್ದುಪಡಿ ಮಾಡುವ ಬಗೆಗೆ. |
| ತೀರ್ಮಾನ | ವಿಶ್ವವಿದ್ಯಾನಿಲಯದಲ್ಲಿ ಪ್ರಸ್ತುತ ಬಿ.ಎಸ್ಸಿ ಗೃಹ ವಿಜ್ಞಾನ (Home Science) ವಿಷಯವು ಇಲ್ಲದೇ ಇರುವುದರಿಂದ ಇದಕ್ಕೆ ಬದಲಾಗಿ ಬಿ.ಎಸ್ಸಿ Food Science & Nutritionಕೋರ್ಸಿನ ವಿದ್ಯಾರ್ಥಿಗಳಿಗೆ ದತ್ತಿಗಳ ಪದಕ ಬಹುಮಾನಗಳನ್ನು ಮೂಲ ಷರತ್ತುಗಳಿಗೆ ತಿದ್ದುಪಡಿ ಮಾಡಿಕೃಷ್ಣಬಾಯಿ ಗುಂಡೋಪಂಥ್ ಚಿನ್ನದ ಪದಕ, ಸುಮತಿ ಶ್ರೀನಿವಾಸನ್ ಚಿನ್ನದ ಪದಕ, ಸುಮಿತ್ರ ಚಿಸ್ಥಿ ಮೆಮೋರಿಯಲ್ ಚಿನ್ನದ ಪದಕವನ್ನು ನೀಡಲು ಸಿಂಡಿಕೇಟ್ ಸಭೆಯು ಅನುಮೋದಿಸಿತು. |
| 2020/8.13 | ನಟನ ರಂಗಶಾಲೆ, "ಕೆ" ಬ್ಲಾಕ್, ರಾಮಕೃಷ್ಣನಗರ, ಮೈಸೂರು ಇವರ ಸಂಸ್ಥೆಯಲ್ಲಿ ಸ್ಪೆಷಲೈಸ್ಡ್ ಪ್ರೋಗ್ರಾಮ್ ಅಡಿಯಲ್ಲಿ 02 ಕೋರ್ಸುಗಳನ್ನು ಹೊಸದಾಗಿ ಪ್ರಾರಂಭಿಸಲು ವಿಶ್ವವಿದ್ಯಾನಿಲಯದ ಪರಿವೀಕ್ಷಣಾ ಸಮಿತಿಯು ಸಲ್ಲಿಸಿರುವ ವರದಿಯನುಸಾರ ಕೈಗೊಂಡಿರುವ ಕ್ರಮದ ಸಂಬಂಧ ಅನುಸಮರ್ಥನೆಯನ್ನು ಕೋರುವ ಬಗ್ಗೆ. |
| ತೀರ್ಮಾನ | ನಟನ ರಂಗಶಾಲೆ, "ಕೆ" ಬ್ಲಾಕ್, ರಾಮಕೃಷ್ಣನಗರ, ಮೈಸೂರು ಇವರ ಸಂಸ್ಥೆಯಲ್ಲಿ ಸ್ಪೆಷಲೈಸ್ಡ್ ಪ್ರೋಗ್ರಾಮ್ ಅಡಿಯಲ್ಲಿ Diploma in Theatre and Certificate course in Theatre Acting02 ಕೋರ್ಸುಗಳನ್ನು ಹೊಸದಾಗಿ ಪ್ರಾರಂಭಿಸಲು ವಿಶ್ವವಿದ್ಯಾನಿಲಯದ ಪರಿವೀಕ್ಷಣಾ ಸಮಿತಿಯು ಸಲ್ಲಿಸಿರುವ ವರದಿಯನುಸಾರ ಕೈಗೊಂಡಿರುವ ಕ್ರಮವನ್ನುಸಿಂಡಿಕೇಟ್ ಸಭೆಯು ಅನುಮೋದಿಸಿತು. |

| | |
|---|---|
| 2020/8.14 | Universal Institute for Private Training, Kuwait ಇವರ ಸಂಸ್ಥೆಯಲ್ಲಿ ಸ್ಪೆಷಲೈಸ್ಡ್ ಪ್ರೋಗ್ರಾಮ್ ಅಡಿಯಲ್ಲಿ 03 ಕೋರ್ಸುಗಳನ್ನು ಹೊಸದಾಗಿ ಪ್ರಾರಂಭಿಸಲು ವಿಶ್ವವಿದ್ಯಾನಿಲಯದ ಪರಿವೀಕ್ಷಣಾ ಸಮಿತಿಯು ಸಲ್ಲಿಸಿರುವ ವರದಿಯನುಸಾರ ಕೈಗೊಂಡಿರುವ ಕ್ರಮದ ಸಂಬಂಧ ಅನುಸಮರ್ಥನೆಯನ್ನು ಕೋರುವ ಬಗ್ಗೆ. |
| ತೀರ್ಮಾನ | Universal Institute for Private Training, Kuwait ಇವರ ಸಂಸ್ಥೆಯಲ್ಲಿ ಸ್ಪೆಷಲೈಸ್ಡ್ ಪ್ರೋಗ್ರಾಮ್ ಅಡಿಯಲ್ಲಿ 1) B.Com (Accounting & Finance) 2) B.B.A (Marketing & Human Resource) 3) B.A (Interior Design) ಈ 03 ಕೋರ್ಸುಗಳನ್ನು ಹೊಸದಾಗಿ ಪ್ರಾರಂಭಿಸಲು ವಿಶ್ವವಿದ್ಯಾನಿಲಯದ ಪರಿವೀಕ್ಷಣಾ ಸಮಿತಿಯು ಸಲ್ಲಿಸಿರುವ ವರದಿಯನುಸಾರ ಕೈಗೊಂಡಿರುವ ಕ್ರಮವನ್ನು ಸಿಂಡಿಕೇಟ್ ಸಭೆಯು ಅನುಸಮರ್ಥಿಸಿತು. |
| 2020/8.15 | ಅಧ್ಯಯನ ಮಂಡಳಿಯನ್ನು ಹೊಸದಾಗಿ ರಚಿಸಿರುವ ಮತ್ತು ಪುನರ್ ರಚಿಸಿರುವ ಬಗ್ಗೆ ಅನುಸಮರ್ಥನೆಗಾಗಿ. |
| ತೀರ್ಮಾನ | ಶೈಕ್ಷಣಿಕ ಹಿತದೃಷ್ಟಿಯಿಂದ Natana Rangabhoomi and IIFA Education ಅಧ್ಯಯನ ಮಂಡಳಿಯನ್ನುಹೊಸದಾಗಿ ರಚಿಸಿ ಮತ್ತು ಆಹಾರ ವಿಜ್ಞಾನ ಮತ್ತು ತಂತ್ರಜ್ಞಾನ ಅಧ್ಯಯನ ಮಂಡಳಿಯನ್ನು ಮೂರು ವರ್ಷಗಳ ಅವಧಿಗೆ ಪುನರ್ ರಚಿಸಿ ಅಧಿಸೂಚನೆಯನ್ನು ಹೊರಡಿಸಿರುವ ವಿಶ್ವವಿದ್ಯಾನಿಲಯದ ಕ್ರಮವನ್ನು ಸಿಂಡಿಕೇಟ್ ಸಭೆಯು ಗಮನಿಸಿ ಅನುಸಮರ್ಥಿಸಿತು. |
| 2020/8.16 | ಮೈಸೂರು ವಿಶ್ವವಿದ್ಯಾನಿಲಯದ ದೂರಶಿಕ್ಷಣ ಕಾರ್ಯಕ್ರಮದಡಿಯಲ್ಲಿ ಸ್ನಾತಕ/ ಸ್ನಾತಕೋತ್ತರ ಪದವಿ ಕೋರ್ಸುಗಳ C1, C2 Assignment ಮೌಲ್ಯಮಾಪನ ಮಾಡಲು ಹಾಗೂ ಪರೀಕ್ಷಾ ಚಟುವಟಿಕೆಗಳಿಗೆ ಸಂಬಂಧಿಸಿದಂತೆ ಮೌಲ್ಯಮಾಪನ ಮಾಡುವ ಅಧ್ಯಾಪಕರುಗಳಿಗೆ ಮತ್ತು ದೂರಶಿಕ್ಷಣ ಕಾರ್ಯಕ್ರಮದಡಿಯಲ್ಲಿ ಜರುಗುವ ಪರಸ್ಥಳದ ಕಲಿಕಾ ಕೇಂದ್ರಗಳಲ್ಲಿ ಪರೀಕ್ಷೆಗೆ ತೆರಳುವ ಅಧೀಕ್ಷಕರು ಹಾಗೂ ಗುಮಾಸ್ತರಿಗೆ TA/DA ಮತ್ತು Halting Allowance ಗೆ ಸಂಬಂಧಿಸಿದಂತೆ ಈ ಕೆಳಕಂಡ ಸಂಭಾವನೆಯನ್ನು ಮಾನ್ಯ ಕುಲಪತಿಗಳವರಿಂದ ದಿನಾಂಕ 22.05.2020ರಂದು ಅನುಮೋದನೆಗೊಂಡಿರುವುದಕ್ಕೆ ಸಿಂಡಿಕೇಟ್ ಸಭೆಯ ಅನುಸಮರ್ಥನೆಗಾಗಿ |
| ತೀರ್ಮಾನ | ಮೈಸೂರು ವಿಶ್ವವಿದ್ಯಾನಿಲಯದ ದೂರಶಿಕ್ಷಣ ಕಾರ್ಯಕ್ರಮದಡಿಯಲ್ಲಿ ಸ್ನಾತಕ/ ಸ್ನಾತಕೋತ್ತರ ಪದವಿ ಕೋರ್ಸುಗಳ C1, C2 Assignment ಮೌಲ್ಯಮಾಪನ ಮಾಡಲು ಹಾಗೂ ಪರೀಕ್ಷಾ ಚಟುವಟಿಕೆಗಳಿಗೆ ಸಂಬಂಧಿಸಿದಂತೆ ಮೌಲ್ಯಮಾಪನ ಮಾಡುವ ಅಧ್ಯಾಪಕರುಗಳಿಗೆ ಮತ್ತು ದೂರಶಿಕ್ಷಣ ಕಾರ್ಯಕ್ರಮದಡಿಯಲ್ಲಿ ಜರುಗುವ ಪರಸ್ಥಳದ ಕಲಿಕಾ ಕೇಂದ್ರಗಳಲ್ಲಿ ಪರೀಕ್ಷೆಗೆ ತೆರಳುವ ಅಧೀಕ್ಷಕರು ಹಾಗೂ ಗುಮಾಸ್ತರಿಗೆ TA/DA ಮತ್ತು Halting Allowance ಗೆ ಸಂಬಂಧಿಸಿದಂತೆ ಮಾನ್ಯ ಕುಲಪತಿಯವರಿಂದ ಅನುಮೋದನೆ ಪಡೆದು ನಿಗದಿಪಡಿಸಿರುವ ಸಂಭಾವನೆಯನ್ನು ಸಿಂಡಿಕೇಟ್ ಸಭೆಯು ಗಮನಿಸಿ ಅನುಸಮರ್ಥಿಸಿತು. |
| 2020/8.17 | ಮೈಸೂರು ವಿಶ್ವವಿದ್ಯಾನಿಲಯದ ವಸತಿ ಗೃಹಗಳ ವರ್ಗೀಕರಣ, ಹಂಚಿಕೆ ಸಂಬಂಧ ರಚಿಸಿರುವ ಮಾರ್ಗಸೂಚಿ ಸಮಿತಿ ಸಭೆಯು ದಿನಾಂಕ 18.08.2020ರಂದು ಸಭೆ ಸೇರಿ, ವಿಶ್ವವಿದ್ಯಾನಿಲಯದ ವಿವಿಧ ಮಾದರಿಯ ವಸತಿಗೃಹಗಳಿಗೆ ಲೈಸೆನ್ಸ್ ಶುಲ್ಕ ನಿಗದಿಪಡಿಸಿರುವ ಸಂಬಂಧ ತೆಗೆದುಕೊಂಡ ನಿರ್ಣಯಗಳ ನಡಾವಳಿಯನ್ನು ಸಿಂಡಿಕೇಟ್ ಸಭೆಯ ಅವಗಾಹನೆ ಹಾಗೂ ತೀರ್ಮಾನಕ್ಕಾಗಿ ಮಂಡಿಸಿದೆ. |
| | ಡಾ. ಈ.ಸಿ. ನಿಂಗರಾಜ ಗೌಡರವರು ಮಾತನಾಡಿ, ಉದ್ಯೋಗಿಗಳಿಗೆ ವಸತಿಗೃಹಗಳನ್ನು ಹಂಚಿಕೆ ಮಾಡುವ ಸಂದರ್ಭದಲ್ಲಿ ವಾಸಯೋಗ್ಯ ವಸತಿಗೃಹಗಳನ್ನು ಮಾತ್ರ ಹಂಚಿಕೆ ಮಾಡುವುದು ಹಾಗೂ ಪತಿ/ಪತ್ನಿ ಇಬ್ಬರು ಸರ್ಕಾರಿ ಉದ್ಯೋಗಿಯಾಗಿದ್ದು, ಇಬ್ಬರು ಮನೆ |

| | |
|---|---|
| ತೀರ್ಮಾನ | ಬಾಡಿಗೆ ಭತ್ಯೆಯನ್ನು ಪಡೆಯುತ್ತಿರುವುದು ಕಂಡುಬಂದಲ್ಲಿ, ಕೂಡಲೇ ಒಬ್ಬರ ಮನೆ ಬಾಡಿಗೆ ಭತ್ಯೆಯನ್ನು ಸ್ಥಗಿತಗೊಳಿಸುವ ಕ್ರಮವನ್ನು ತುರ್ತಾಗಿ ಕೈಗೊಳ್ಳಬೇಕೆಂದು ತಿಳಿಸಿದರು.<br><br>ಮಾನ್ಯ ಕುಲಪತಿಯವರು ಮಾತನಾಡಿ, ವಾಸಯೋಗ್ಯ ವಸತಿಗೃಹಗಳನ್ನು ಮಾತ್ರ ಹಂಚಿಕೆ ಮಾಡಲಾಗುವುದು ಹಾಗೂ ಯಾರಿಗೂ ತೊಂದರೆಯಾಗದಂತೆ ವಾಸಯೋಗ್ಯವಲ್ಲದ ವಸತಿಗೃಹಗಳನ್ನು ನೆಲಸಮಗೊಳಿಸಲಾಗುವುದೆಂದು ತಿಳಿಸಿದರು.<br><br>ದಿನಾಂಕ: 18-08-2020ರಂದು ಜರುಗಿದ ಮೈಸೂರು ವಿಶ್ವವಿದ್ಯಾನಿಲಯದ ವಸತಿ ಗೃಹಗಳ ವರ್ಗೀಕರಣ ಹಾಗೂ ಹಂಚಿಕೆ ಸಂಬಂಧ ರಚಿಸಿರುವ ಮಾರ್ಗಸೂಚಿ ಸಮಿತಿ ಸಭೆಯು ಮೈಸೂರು ವಿಶ್ವವಿದ್ಯಾನಿಲಯದ ವಿವಿಧ ಮಾದರಿಯ ವಸತಿಗೃಹಗಳಿಗೆ ನಿಗದಿಪಡಿಸಲಾಗಿರುವ ಪರಿಷ್ಕೃತ ಮನೆ ಬಾಡಿಗೆಯನ್ನು ಸಿಂಡಿಕೇಟ್ ಅನುಮೋದಿಸಿತು. |
| 2020/8.18 | ಎನ್.ಸಿ.ಸಿ. ಕೆಡೆಟ್‌ಗಳಿಗೆ Small arms range Firing range course ಕಾಮಗಾರಿಯ ಅಂದಾಜು ವೆಚ್ಚಗಳನ್ನು ಭರಿಸುವ ಬಗ್ಗೆ. |
| ತೀರ್ಮಾನ | ದಿನಾಂಕ: 23-03-2020ರಂದು ಜರುಗಿದ ಸಿಂಡಿಕೇಟ್ ಸಭೆಯ ತೀರ್ಮಾನದನ್ವಯ, N.C.C. Groups Headquarter, Vinoba Road, Mysuru ಇವರಿಗೆ ಮೈಸೂರು ವಿಶ್ವವಿದ್ಯಾನಿಲಯದ ಆವರಣದಲ್ಲಿ ಎನ್.ಸಿ.ಸಿ. ಕೆಡೆಟ್‌ಗಳಿಗೆ Small arms range Firing range course ಪ್ರಾರಂಭಿಸಲು 40X25 ಜಾಗವನ್ನು ನೀಡಲಾಯಿತು.<br><br>Lt. Col. S Abdul Kalaam, Training Officer, N.C.C Groups Headquarter, Vinoba Road, Mysuru ಇವರು ಸದರಿ ಕಾಮಗಾರಿಗೆ ಹಣದ ಕೊರತೆ ಇದ್ದು, ಎನ್.ಸಿ.ಸಿ. ಕಾಯ್ದೆಯ ಪ್ರಕಾರ ಶಿಕ್ಷಣ ಸಂಸ್ಥೆಗಳೆ rangeಗಳನ್ನು ನಿರ್ಮಿಸಬೇಕಾಗಿದ್ದು, ವಿಶ್ವವಿದ್ಯಾನಿಲಯದ ವಿದ್ಯಾರ್ಥಿಗಳು ಈ ಕೋರ್ಸಿಗೆ ಸೇರ್ಪಡೆಗೊಳ್ಳುವುದರಿಂದ ಸದರಿ ಕಾಮಗಾರಿಯ ವೆಚ್ಚವನ್ನು ವಿಶ್ವವಿದ್ಯಾನಿಲಯವು ಭರಿಸಬೇಕೆಂದು ಕೋರಿರುತ್ತಾರೆ.<br><br>ಎನ್.ಸಿ.ಸಿ. ಕೆಡೆಟ್‌ಗಳಿಗೆ Small arms range Firing range course ಕಾಮಗಾರಿಯನ್ನು ಪ್ರಾರಂಭಿಸಲು ಹಾಗೂ ಸದರಿ ಕಾಮಗಾರಿಯ ವೆಚ್ಚ ರೂ.6,81,800/-ಗಳನ್ನು ವಿಶ್ವವಿದ್ಯಾನಿಲಯದ ವತಿಯಿಂದ ಭರಿಸಲು ಸಿಂಡಿಕೇಟ್ ಅನುಮೋದಿಸಿತು. |
| 2020/8.19 | ದಿವಂಗತ ಯೋಗೇಶ್ ಬಾಬು, ಶೀಘ್ರಲಿಪಿಗಾರರು, ಹಣಕಾಸು ವಿಭಾಗ, ಮೈಸೂರುವಿಶ್ವವಿದ್ಯಾನಿಲಯ, ಮೈಸೂರು ಅವರ ಮಗಳಾದ ಕು: :ಪುಣ್ಯ ಎಂ.ವೈ. ನಾಯಕ ರವರಿಗೆ ಅನುಕಂಪದ ಆಧಾರದ ಮೇಲೆ ಉದ್ಯೋಗ ನೀಡುವ ಬಗ್ಗೆ. |
| ತೀರ್ಮಾನ | ದಿವಂಗತ ಯೋಗೇಶ್ ಬಾಬು, ಶೀಘ್ರಲಿಪಿಗಾರರು, ಹಣಕಾಸು ವಿಭಾಗ, ಮೈಸೂರುವಿಶ್ವವಿದ್ಯಾನಿಲಯ, ಮೈಸೂರು ಇವರು ಸೇವೆಯಲ್ಲಿರುವಾಗಲೇ ನಿಧನ ಹೊಂದಿರುತ್ತಾರೆ. ಇವರ ಮಗಳಾದ ಕು: :ಪುಣ್ಯ ಎಂ.ವೈ. ನಾಯಕ ಅವರು ದ್ವಿತೀಯ ಪಿಯುಸಿ ತೇರ್ಗಡೆಯಾಗಿದ್ದು ಹಾಗೂ ಅರ್ಹ ವಯೋಮಿತಿಯನ್ನು ಹೊಂದಿರುವುದರಿಂದ, ಅನುಕಂಪದ ಆಧಾರದ ಮೇಲೆ ಉದ್ಯೋಗ ನೀಡಲು ರಚಿಸಲಾಗಿರುವ ಅಧಿನಿಯಮಗಳ ಅನ್ವಯ ಕು: :ಪುಣ್ಯ ಎಂ.ವೈ. ನಾಯಕರವರಿಗೆ ಅನುಕಂಪದ ಆಧಾರದ ಮೇಲೆ ದ್ವಿತೀಯ ದರ್ಜೆ ಗುಮಾಸ್ತರ ಹುದ್ದೆಗೆ ನೇಮಕ ಮಾಡಲು ಸಿಂಡಿಕೇಟ್ ಸಭೆ ಅನುಮೋದಿಸಿತು. |
| 2020/8.20 | ಸಹಾಯಕ ಕಾರ್ಯಪಾಲಕ ಅಭಿಯಂತರರ ಒಂದು ಹುದ್ದೆಯನ್ನು ಸೃಜಿಸಿರುವ ಬಗ್ಗೆ. |
| | ಮೈಸೂರು ವಿಶ್ವವಿದ್ಯಾನಿಲಯಕ್ಕೆ ಡಿಸೆಂಬರ್ 2020 ಯುಜಿಸಿ ಧನಸಹಾಯ ಆಯೋಗದ ವತಿಯಿಂದ ನ್ಯಾಕ್ ಸಮಿತಿಯು ಭೇಟಿ ನೀಡಲಿದ್ದು, ಈ ಹಿನ್ನೆಲೆಯಲ್ಲಿ ವಿಶ್ವವಿದ್ಯಾನಿಲಯದಲ್ಲಿ ಹೆಚ್ಚಿನ ಸಿವಿಲ್ ಕಾಮಗಾರಿಗಳನ್ನು ಕೈಗೊಳ್ಳಬೇಕಾಗಿದೆ. ಆದ್ದರಿಂದ, ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಮಂಜೂರಾದ ಒಂದು ಸಹಾಯಕ ಕಾರ್ಯಪಾಲಕ ಇಂಜಿನಿಯರ್ ಹುದ್ದೆಗೆ ಎದುರಾಗಿ ಶ್ರೀ.ಶಿವಲಿಂಗಪ್ರಸಾದ್.ಆರ್.ಪಿ ಇವರಿಗೆ ಪದೋನ್ನತಿ |

| | |
|---|---|
| | ನೀಡಲಾಗಿದ್ದು, ಈ ಹುದ್ದೆಗೆ ಎದುರಾಗಿ ಸರ್ಕಾರದ ವತಿಯಿಂದ ನಿಯೋಜನೆಯ ಆಧಾರದ ಮೇಲೆ ಶ್ರೀ.ಗಿರೀಶ್.ಜಿ.ಹೆಚ್, ಸಹಾಯಕ ಕಾರ್ಯಪಾಲಕ ಅಭಿಯಂತರರು ಕಾರ್ಯನಿರ್ವಹಿಸುತ್ತಿದ್ದಾರೆ. ಆದ್ದರಿಂದ ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಒಂದು ಸಹಾಯಕ ಕಾರ್ಯಪಾಲಕ ಅಭಿಯಂತರರ ಹುದ್ದೆಯನ್ನು ಸೂಪರ್‌ನ್ಯೂಮರರಿ ಹುದ್ದೆಯಾಗಿ ಸೃಜಿಸಿ, ಈ ಹುದ್ದೆಗೆ ಶ್ರೀ.ಗಿರೀಶ್.ಹೆಚ್.ಸಿ ಇವರನ್ನು ನಿಯೋಜನೆ ಆಧಾರದ ಮೇಲೆ ಪ್ರಸ್ತುತ ಪಡೆಯುತ್ತಿರುವ ವೇತನ ಮತ್ತು ವೇತನ ಶ್ರೇಣಿಯಲ್ಲಿ ದಿ.10-06-2020 ರಿಂದ ಜಾರಿಗೆ ಬಂದಂತೆ ಮುಂದುವರೆಸಲಾಗಿದೆ. |
| ತೀರ್ಮಾನ | ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಒಂದು ಸಹಾಯಕ ಕಾರ್ಯಪಾಲಕ ಅಭಿಯಂತರರ ಹುದ್ದೆಯನ್ನು ಸೂಪರ್‌ನ್ಯೂಮರರಿ ಹುದ್ದೆಯಾಗಿ ಸೃಜಿಸಿ ಆ ಹುದ್ದೆಗೆ ಎದುರಾಗಿ ಶ್ರೀ.ಗಿರೀಶ್.ಹೆಚ್.ಸಿ, ಸಹಾಯಕ ಕಾರ್ಯಪಾಲಕ ಅಭಿಯಂತರರು ಇವರನ್ನು ನಿಯೋಜನೆ ಆಧಾರದ ಮುಂದುವರೆಸಿರುವ ಕ್ರಮವನ್ನು ಸಿಂಡಿಕೇಟ್ ಅನುಸಮರ್ಥಿಸಿತು. |
| 2020/8.21 | ಡಾ. ಕೃಷ್ಣಕುಮಾರಿ ಮನವಳ್ಳಿ, ಪ್ರಾಧ್ಯಾಪಕರು, ಸ್ನಾತಕೋತ್ತರ ಇಂಗ್ಲೀಷ್ ಅಧ್ಯಯನ ವಿಭಾಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ ಇವರನ್ನು ಮೈಸೂರು ವಿಶ್ವವಿದ್ಯಾನಿಲಯದ ಸ್ನಾತಕೋತ್ತರ ಇಂಗ್ಲೀಷ್ ಅಧ್ಯಯನ ವಿಭಾಗ, ಮಾ.ಗಂ. ಮೈಸೂರು ಇಲ್ಲಿಗೆ ನಿಯೋಜನೆ ಮೇರೆಗೆ ವರ್ಗಾಯಿಸಿರುವ ಬಗ್ಗೆ. |
| | ಕರ್ನಾಟಕ ಸರ್ಕಾರದ ಅಧಿಸೂಚನೆ ದಿನಾಂಕ: 15-07-2020ರಲ್ಲಿ ಡಾ.ಕೃಷ್ಣಕುಮಾರಿ ಮನವಳ್ಳಿ, ಪ್ರಾಧ್ಯಾಪಕರು, ಸ್ನಾತಕೋತ್ತರ ಇಂಗ್ಲೀಷ್ ಅಧ್ಯಯನ ವಿಭಾಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ ಇವರನ್ನು ಮೈಸೂರು ವಿಶ್ವವಿದ್ಯಾನಿಲಯದ ಸ್ನಾತಕೋತ್ತರ ಇಂಗ್ಲೀಷ್ ಅಧ್ಯಯನ ವಿಭಾಗ, ಮಾ.ಗಂ. ಮೈಸೂರು ಇಲ್ಲಿಗೆ ನಿಯೋಜನೆ ಮೇರೆಗೆ ತಕ್ಷಣದಿಂದ ಹಾಗೂ ಮುಂದಿನ ಆದೇಶದವರೆಗೆ ಜಾರಿಗೆ ಬಂದಂತೆ ವರ್ಗಾಯಿಸಲಾಗಿದೆ. ಈ ಸಂಬಂಧ ಘನ ಸರ್ಕಾರದ ಆದೇಶದ ಮೇರೆಗೆ ದಿನಾಂಕ: 22-07-2020ರಂದು ಸಿಂಡಿಕೇಟ್ ತೀರ್ಮಾನವನ್ನು ಕಾಯ್ದಿರಿಸಿ, ಇಂಗ್ಲೀಷ್ ಅಧ್ಯಯನ ವಿಭಾಗದಲ್ಲಿ ಪ್ರಾಧ್ಯಾಪಕರಾಗಿ ಕರ್ತವ್ಯಕ್ಕೆ ವರದಿ ಮಾಡಿಸಿಕೊಳ್ಳಲಾಗಿದೆ ಹಾಗೂ ಸರ್ಕಾರದ ಅಧಿಸೂಚನೆಯಲ್ಲಿ ಸದರಿಯವರ ವೇತನ, ಪಿಂಚಣಿ ಮತ್ತು ಇತರೆ ಸೌಲಭ್ಯಗಳ ಬಗ್ಗೆ ನಿರ್ದೇಶನ ನೀಡಿರುವುದಿಲ್ಲ ಮತ್ತು ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಹೆಚ್.ಆರ್.ಎಂ.ಎಸ್ ಅಳವಡಿಸಿಕೊಂಡಿರುವುದರಿಂದ ಈ ಬಗ್ಗೆ ಸ್ಪಷ್ಟ ನಿರ್ದೇಶನ ನೀಡುವಂತೆ ಸರ್ಕಾರಕ್ಕೆ ಪತ್ರ ಬರೆಯಲಾಗಿರುತ್ತದೆ.<br><br>ಪ್ರೊ.ಎಸ್.ಡಿ.ದೊಡ್ಡಚಾರಿ ಇವರು ಮಾತನಾಡಿ, ಸರ್ಕಾರದ ಅಧಿಸೂಚನೆಯನ್ವಯ ಡಾ.ಕೃಷ್ಣಕುಮಾರಿ ಮನವಳ್ಳಿ ಇವರನ್ನು ಮೈಸೂರು ವಿಶ್ವವಿದ್ಯಾನಿಲಯದ ಇಂಗ್ಲೀಷ್ ಅಧ್ಯಯನ ವಿಭಾಗದಲ್ಲಿ ಕರ್ತವ್ಯಕ್ಕೆ ವರದಿ ಮಾಡಿಕೊಂಡಿರುವುದು ಸರಿಯಷ್ಟೆ. ಆದರೆ, ಅಧ್ಯಯನ ವಿಭಾಗದ ಅಧ್ಯಕ್ಷರ ಹುದ್ದೆಯನ್ನು ಅಥವಾ ಅಧ್ಯಯನ ಮಂಡಳಿ ಅಧ್ಯಕ್ಷರ ಹುದ್ದೆಯನ್ನು ಪ್ರಸ್ತುತ ಇಂಗ್ಲೀಷ್ ಅಧ್ಯಯನ ವಿಭಾಗದಲ್ಲಿ ಕಾರ್ಯನಿರ್ವಹಿಸುತ್ತಿರುವ ಅಧ್ಯಾಪಕರುಗಳಿಗೆ ಮಾತ್ರ ಪರಿಗಣಿಸುವುದು ಸೂಕ್ತ. ಈ ರೀತಿ ನಿಯೋಜನೆಗೊಂಡ ಪ್ರಾಧ್ಯಾಪಕರುಗಳಿಗೆ ಅಧ್ಯಯನ ವಿಭಾಗದ ಅಧ್ಯಕ್ಷರ ಹುದ್ದೆಗೆ ಅಥವಾ ಅಧ್ಯಯನ ಮಂಡಳಿ ಅಧ್ಯಕ್ಷರ ಹುದ್ದೆಗೆ ನೇಮಕ ಮಾಡದಂತೆ ಸರ್ಕಾರಕ್ಕೆ ಪತ್ರ ಬರೆದು ಕ್ರಮ ತೆಗೆದುಕೊಳ್ಳಬೇಕೆಂದು ತಿಳಿಸಿದರು. |
| ತೀರ್ಮಾನ | ಕರ್ನಾಟಕ ಸರ್ಕಾರದ ಅಧಿಸೂಚನೆಯನ್ವಯ, ಡಾ.ಕೃಷ್ಣಕುಮಾರಿ ಮನವಳ್ಳಿ, ಪ್ರಾಧ್ಯಾಪಕರು, ಸ್ನಾತಕೋತ್ತರ ಇಂಗ್ಲೀಷ್ ಅಧ್ಯಯನ ವಿಭಾಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ ಇವರನ್ನು ಮೈಸೂರು ವಿಶ್ವವಿದ್ಯಾನಿಲಯದ ಸ್ನಾತಕೋತ್ತರ ಇಂಗ್ಲೀಷ್ ಅಧ್ಯಯನ ವಿಭಾಗ, ಮಾ.ಗಂ. ಮೈಸೂರು ಇಲ್ಲಿಗೆ ನಿಯೋಜನೆ ಮೇರೆಗೆ ಕರ್ತವ್ಯಕ್ಕೆ ವರದಿ ಮಾಡಿಕೊಂಡಿರುವುದನ್ನು ಸಭೆಯು ಅನುಸಮರ್ಥಿಸಿತು ಹಾಗೂ ಬೇರೆ ವಿಶ್ವವಿದ್ಯಾನಿಲಯದಿಂದ ಮೈಸೂರು ವಿಶ್ವವಿದ್ಯಾನಿಲಯಕ್ಕೆ ನಿಯೋಜನೆಗೊಂಡ ಪ್ರಾಧ್ಯಾಪಕರುಗಳನ್ನು ಮೈಸೂರು ವಿಶ್ವವಿದ್ಯಾನಿಲಯದ ಅಧ್ಯಯನ ವಿಭಾಗದ ಅಧ್ಯಕ್ಷರ ಹುದ್ದೆಗೆ ಅಥವಾ ಅಧ್ಯಯನ ಮಂಡಳಿ ಅಧ್ಯಕ್ಷರ ಹುದ್ದೆಗೆ ನೇಮಕ ಮಾಡದೇ, ಪ್ರಸ್ತುತ |

| | |
|---|---|
| | ಕಾರ್ಯನಿರ್ವಹಿಸುತ್ತಿರುವ ಪ್ರಾಧ್ಯಾಪಕರುಗಳನ್ನು ಮಾತ್ರ ಸದರಿ ಹುದ್ದೆಗಳಿಗೆ ಅಧ್ಯಕ್ಷರುಗಳನ್ನಾಗಿ ನೇಮಕ ಮಾಡುವ ಸಂಬಂಧ ಸರ್ಕಾರಕ್ಕೆ ಪತ್ರ ಬರೆಯಲು ತೀರ್ಮಾನಿಸಲಾಯಿತು. |
| 2020/8.22 | ದಿನಾಂಕ 06.08.2020ರಂದು ಮಾನ್ಯ ಕುಲಪತಿಯವರ ಅಧ್ಯಕ್ಷತೆಯಲ್ಲಿ ನಡೆದ ಸ್ಥಾಯಿ ಸಮಿತಿ ಸಭೆಯ ಶಿಫಾರಸ್ಸನ್ನು ಪರಿಗಣಿಸುವ ಬಗ್ಗೆ. |
| ತೀರ್ಮಾನ | ದಿನಾಂಕ: 06-08-2020ರಂದು ಪರಿಶಿಷ್ಟ ಜಾತಿ : ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳ ಕ್ಷೇಮಾಭಿವೃದ್ಧಿಗಾಗಿ ಕಾರ್ಯಕ್ರಮಗಳನ್ನು ಅನುಷ್ಠಾನಕ್ಕೆ ತರುವ ಬಗ್ಗೆ ನಡೆದ ಸ್ಥಾಯಿ ಸಮಿತಿ ಸಭೆಯ ಶಿಫಾರಸ್ಸುಗಳನ್ನು ಸಭೆಯು ಅನುಮೋದಿಸಿತು. |
| 2020/8.23 | ವಿಶ್ವವಿದ್ಯಾನಿಲಯ-ಕೈಗಾರಿಕಾ ಅನುನಯ ಸಂಬಂಧ ಕೇಂದ್ರಕ್ಕೆ ಸಂಬಂಧಿಸಿದಂತೆ ಸಿದ್ಧಪಡಿಸಿರುವ ಮಾರ್ಗಸೂಚಿಯ ಅನುಮೋದನೆಗಾಗಿ |
| ತೀರ್ಮಾನ | ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಸ್ಥಾಪಿಸಲಾಗಿರುವ ವಿಶ್ವವಿದ್ಯಾನಿಲಯ-ಕೈಗಾರಿಕಾ ಅನುನಯ ಸಂಬಂಧ ಕೇಂದ್ರಕ್ಕೆ ಸಂಬಂಧಿಸಿದಂತೆ ಸಿದ್ಧಪಡಿಸಿರುವ ಮಾರ್ಗಸೂಚಿಯನ್ನು ಹಾಗೂ ವಿಶ್ವವಿದ್ಯಾನಿಲಯ-ಕೈಗಾರಿಕಾ ಅನುನಯ ಸಂಬಂಧ ಕೇಂದ್ರದ ಸಲಹಾ ಸಮಿತಿಗೆ ಇಬ್ಬರು ಸಿಂಡಿಕೇಟ್ ಸದಸ್ಯರುಗಳನ್ನು ನಾಮನಿರ್ದೇಶನ ಮಾಡಲು ಸಭೆಯು ಅನುಮೋದಿಸಿತು. |
| 2020/8.24 | 2020-21ನೇ ಸಾಲಿನ ವಿಶ್ವವಿದ್ಯಾನಿಲಯದ ಕ್ರೀಡಾ ಸಮಿತಿಯ ಮೊದಲನೆ ಸಭೆಯ ನಡಾವಳಿಯನ್ನು ಅನುಮೋದಿಸುವ ಬಗ್ಗೆ. |
| ತೀರ್ಮಾನ | 2020-21ನೇ ಸಾಲಿನ ವಿಶ್ವವಿದ್ಯಾನಿಲಯದ ಕ್ರೀಡಾ ಸಮಿತಿಯ ಮೊದಲನೆ ಸಭೆಯ ನಡಾವಳಿಯನ್ನು ಸಭೆಯು ಅನುಮೋದಿಸಿತು. |
| 2020/8.25 | 100ನೇ ವಾರ್ಷಿಕ ಘಟಿಕೋತ್ಸವದ ಸವಿನೆನಪಿಗಾಗಿ ಹಾಗೂ ವಿಶ್ವವಿದ್ಯಾನಿಲಯದ ಎಲ್ಲಾ ವಿಭಾಗಗಳ ಸಂಶೋಧನೆ ಮತ್ತು ಶೈಕ್ಷಣಿಕ ಸಾಧನೆಯನ್ನು ವಿದ್ಯಾರ್ಥಿಗಳಿಗೆ, ಅಧ್ಯಾಪಕರಿಗೆ, ಶಿಕ್ಷಣಾಸಕ್ತರಿಗೆ ಮತ್ತು ಸಾರ್ವಜನಿಕರಿಗೆ ತಿಳಿಸುವ ಉದ್ದೇಶದಿಂದ 2021ನೇ ಸಾಲಿನಲ್ಲಿ "ಮಾನಸ-2021 ವಸ್ತುಪ್ರದರ್ಶನ"ವನ್ನು ಏರ್ಪಡಿಸಬೇಕೆಂದು ಮಾನ್ಯ ಸಿಂಡಿಕೇಕೇಟ್ ಸದಸ್ಯರು ತಿಳಿಸಿರುವ ಹಿನ್ನೆಲೆಯಲ್ಲಿ ಪೂರ್ವಭಾವಿ ಸಿದ್ಧತೆಯನ್ನು ಮಾಡಿಕೊಳ್ಳುವಂತೆ ವಿಷಯವನ್ನು ಸಿಂಡಿಕೇಟ್ ಸಭೆಯ ಪರಿಶೀಲನೆಗೆ ಮತ್ತು ತೀರ್ಮಾನಕ್ಕಾಗಿ ಮಂಡಿಸಿದೆ. |
| ತೀರ್ಮಾನ | ಡಾ.ಈ.ಸಿ.ನಿಂಗರಾಜ ಗೌಡರವರು ಮಾತನಾಡಿ, ಮೈಸೂರು ವಿಶ್ವವಿದ್ಯಾನಿಲಯವು ಪ್ರತಿಷ್ಠಿತ ವಿಶ್ವವಿದ್ಯಾನಿಲಯವಾಗಿ NIRF ರ್‍ಯಾಂಕ್ ಪಟ್ಟಿಯಲ್ಲಿ 27 ಸ್ಥಾನ ಪಡೆದಿರುವುದರಿಂದ ಹಾಗೂ 100ನೇ ವಾರ್ಷಿಕ ಘಟಿಕೋತ್ಸವದ ಸವಿನೆನಪಿಗಾಗಿ ವಿಶ್ವವಿದ್ಯಾನಿಲಯದ ಎಲ್ಲಾ ವಿಭಾಗಗಳ ಸಂಶೋಧನೆ ಮತ್ತು ಶೈಕ್ಷಣಿಕ ಸಾಧನೆಯನ್ನು ವಿದ್ಯಾರ್ಥಿಗಳಿಗೆ, ಅಧ್ಯಾಪಕರುಗಳಿಗೆ, ಶಿಕ್ಷಣಾಸಕ್ತರಿಗೆ ಮತ್ತು ಸಾರ್ವಜನಿಕರಿಗೆ ಪ್ರಸ್ತುತಪಡಿಸುವ ಉದ್ದೇಶದಿಂದ "ಮಾನಸ-2021 ವಸ್ತುಪ್ರದರ್ಶನ"ವನ್ನು ಮಾನಸಗಂಗೋತ್ರಿಯಲ್ಲದೇ ಮೈಸೂರು ವಿಶ್ವವಿದ್ಯಾನಿಲಯದ ಸ್ನಾತಕೋತ್ತರ ಕೇಂದ್ರಗಳಾದ ಮಂಡ್ಯ, ಹಾಸನ ಹಾಗೂ ಚಾಮರಾಜನಗರಗಳಲ್ಲೂ ಏರ್ಪಡಿಸುವುದು ಹಾಗೂ "ಮಾನಸ-2021 ವಸ್ತುಪ್ರದರ್ಶನ" ಪೂರ್ಣಪ್ರಮಾಣದಲ್ಲಿ ಯಶ್ವಸಿಯಾಗಲು ಪೂರ್ವಸಿದ್ಧತೆ ಮಾಡಿಕೊಳ್ಳುವ ಸಂಬಂಧ ಸಮಿತಿ ರಚಿಸಬೇಕೆಂದು ತಿಳಿಸಿದರು.<br><br>"ಮಾನಸ-2021 ವಸ್ತುಪ್ರದರ್ಶನ"ವನ್ನು ಮಾನಸಗಂಗೋತ್ರಿ, ಮೈಸೂರು ವಿಶ್ವವಿದ್ಯಾನಿಲಯದ ಸ್ನಾತಕೋತ್ತರ ಕೇಂದ್ರಗಳಾದ ಮಂಡ್ಯ, ಹಾಸನ ಹಾಗೂ ಚಾಮರಾಜನಗರಗಳಲ್ಲೂ ಏರ್ಪಡಿಸಲು ಹಾಗೂ "ಮಾನಸ-2021 ವಸ್ತುಪ್ರದರ್ಶನ" ಪೂರ್ವಸಿದ್ಧತೆಗಾಗಿ ಇಬ್ಬರು ಸಿಂಡಿಕೇಟ್ ಸದಸ್ಯರನ್ನೊಳಗೊಂಡಂತೆ ಸಮಿತಿ ರಚಿಸಲು ಸಭೆಯು ಅನುಮೋದಿಸಿತು. |

| | |
|---|---|
| 2020/8.26 | ದೂರ ಶಿಕ್ಷಣ ನಿರ್ದೇಶನಾಲಯ ಕಛೇರಿಯನ್ನು NCHS ಕಟ್ಟಡದಿಂದ ಮೌಲ್ಯಭವನಕ್ಕೆ ಸ್ಥಳಾಂತರಿಸಿದ್ದು, ಕಛೇರಿಯಲ್ಲಿನ ನಿರ್ದೇಶಕರ ಕೊಠಡಿ ಹಾಗೂ ಕಛೇರಿ ಸಿಬ್ಬಂದಿವರ್ಗದವರ ಕೊಠಡಿಗಳ Furnishing, Networking and Electrification ಕೆಲಸಗಳನ್ನು ನಡೆಸುವ ಸಂಬಂಧ ಸಿಂಡಿಕೇಟಿನ ಸಭೆಯ ಅನುಮೋದನೆ ಹಾಗೂ ಅನುಸಮರ್ಥನೆಗಾಗಿ. |
| ತೀರ್ಮಾನ | ದೂರ ಶಿಕ್ಷಣ ನಿರ್ದೇಶನಾಲಯದ ಕಛೇರಿಯಲ್ಲಿನ ನಿರ್ದೇಶಕರ ಕೊಠಡಿ ಹಾಗೂ ಕಛೇರಿ ಸಿಬ್ಬಂದಿವರ್ಗದವರ ಕೊಠಡಿಗಳ Furnishing, Networking and Electrification ಕಾಮಗಾರಿಗಳನ್ನು ಅಲ್ಪಾವಧಿ ಟೆಂಡರ್ ಪ್ರಕಟಣೆ ಆಹ್ವಾನಿಸಿದ ಆರ್ಥಿಕ ಬಿಡ್‌ನಲ್ಲಿ ಕನಿಷ್ಠ ದರ ನಮೂದಿಸಿರುವ L1 ಬಿಡ್‌ದಾರರಾದ M/s Dreams Interiors, Mysuru ಇವರಿಂದ ರೂ.59,65,944/-ಗಳ ವೆಚ್ಚದಲ್ಲಿ ಕೈಗೊಳ್ಳಲು ಆಡಳಿತಾತ್ಮಕ ಮಂಜೂರಾತಿ ಪಡೆದು ಸಿಂಡಿಕೇಟ್ ಸಭೆಯ ಅನುಮೋದನೆ ಕಾಯ್ದಿರಿಸಿ, ಕೈಗೊಂಡಿರುವ ಕಾಮಗಾರಿಗಳಿಗೆ ಸಿಂಡಿಕೇಟ್ ಸಭೆಯು ಅನುಸಮರ್ಥಿಸಿತು. |
| 2020/8.27 | ಹಾಸನ ಜಿಲ್ಲೆಯ ಹೆತ್ತೂರಿನ ಹಾಗೂ ಚಾಮರಾಜನಗರ ಜಿಲ್ಲೆಯ ತೆರಕಣಾಂಬಿಯ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳನ್ನು ವಿಶ್ವವಿದ್ಯಾನಿಲಯದ ಘಟಕ ಕಾಲೇಜುಗಳಾಗಿ ಪರಿವರ್ತಿಸುವ ಬಗ್ಗೆ. |
| ತೀರ್ಮಾನ | ರಾಷ್ಟ್ರೀಯ ನೂತನ ಶಿಕ್ಷಣ ನೀತಿ-2020ರ ಸಮಗ್ರತಾ ದೃಷ್ಟಿಯ ಬಹುಶಿಸ್ತೀಯ ಉದ್ಯೋಗಾಭಿಮುಖ ಶಿಕ್ಷಣವನ್ನು ಬಹು ಆಗಮನ-ನಿರ್ಗಮನ ಆಯ್ಕೆಯ ಸಹಿತ ಪದವಿ ಕೋರ್ಸುಗಳನ್ನು ಪ್ರಾರಂಭಿಸುವಂತೆ ಕಾಲೇಜು ಶಿಕ್ಷಣ ಆಯುಕ್ತರು, ಕಾಲೇಜು ಶಿಕ್ಷಣ ಇಲಾಖೆ, ಬೆಂಗಳೂರು ಇವರು ಹಾಸನ ಜಿಲ್ಲೆಯ ಹೆತ್ತೂರಿನ ಹಾಗೂ ಚಾಮರಾಜನಗರ ಜಿಲ್ಲೆಯ ತೆರಕಣಾಂಬಿಯ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳನ್ನು ಮೈಸೂರು ವಿಶ್ವವಿದ್ಯಾನಿಲಯಕ್ಕೆ ವರ್ಗಾಯಿಸಿ ವಿಶ್ವವಿದ್ಯಾನಿಲಯದ ಘಟಕ ಕಾಲೇಜುಗಳಾಗಿ ಪರಿವರ್ತಿಸುವಂತೆ ತಿಳಿಸಿರುತ್ತಾರೆ.<br><br>ಈ ಬಗ್ಗೆ ಸುದೀರ್ಘವಾಗಿ ಚರ್ಚಿಸಿದ ಸಿಂಡಿಕೇಟ್ ಸಭೆಯು ಹಾಸನ ಜಿಲ್ಲೆಯ ಹೆತ್ತೂರಿನ ಹಾಗೂ ಚಾಮರಾಜನಗರ ಜಿಲ್ಲೆಯ ತೆರಕಣಾಂಬಿಯ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳನ್ನು ಮೈಸೂರು ವಿಶ್ವವಿದ್ಯಾನಿಲಯಕ್ಕೆ ವರ್ಗಾಯಿಸಿಕೊಂಡು ಹಾಸನ ಜಿಲ್ಲೆಯ ಹೆತ್ತೂರಿನ ಹಾಗೂ ಚಾಮರಾಜನಗರ ಜಿಲ್ಲೆಯ ತೆರಕಣಾಂಬಿಯ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳನ್ನು ವಿಶ್ವವಿದ್ಯಾನಿಲಯದ ಘಟಕ ಕಾಲೇಜುಗಳಾಗಿ ಪರಿವರ್ತಿಸಲು ಅನುಮೋದಿಸಿತು. |
| 2020/8.28 | ಶ್ರೀ ಹೆಚ್. ಕುಮಾರ್, ಕಾರ್ಯಪಾಲಕ ಅಭಿಯಂತರರು, ಇಂಜಿನಿಯರಿಂಗ್ ವಿಭಾಗ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು ಇವರನ್ನು ನಿವೃತ್ತಿ ನಂತರವು ಸೇವೆಯಲ್ಲಿ ಮುಂದುವರಿಸುವ ಬಗ್ಗೆ. |
| | ಶ್ರೀ ಹೆಚ್. ಕುಮಾರ್, ಕಾರ್ಯಪಾಲಕ ಅಭಿಯಂತರರು, ಇಂಜಿನಿಯರಿಂಗ್ ವಿಭಾಗ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು ಇವರು ದಿನಾಂಕ: 30-10-2020 ರಂದು ವಯೋನಿವೃತ್ತಿ ಹೊಂದುತ್ತಿದ್ದು, NAAC Peer Team ಮೈಸೂರು ವಿಶ್ವವಿದ್ಯಾನಿಲಯಕ್ಕೆ ಭೇಟಿ ನೀಡುವ ಮೊದಲು ವಿವಿಧ ಹಂತದಲ್ಲಿ ಪ್ರಗತಿಯಲ್ಲಿರುವಂತಹ ಎಲ್ಲಾ ಯೋಜನೆಗಳನ್ನು ಪೂರ್ಣಗೊಳಿಸಬೇಕಾಗಿರುವುದರಿಂದ ಶ್ರೀ.ಹೆಚ್.ಕುಮಾರ್ ಕಾರ್ಯಕ್ಷಮತೆಯು ತೃಪ್ತಿಕರವಾಗಿದ್ದು, ಈಗಾಗಲೇ ನಿವೃತ್ತಿ ನಂತರವೂ ಕೆಲವರನ್ನು ಸೇವೆಯಲ್ಲಿ ಮುಂದುವರೆಸಿರುವ ನಿದರ್ಶನಗಳಿರುವುದರಿಂದ ಶ್ರೀ.ಹೆಚ್.ಕುಮಾರ್, ಕಾರ್ಯಪಾಲಕ ಅಭಿಯಂತರರು ಇವರನ್ನು ನಿವೃತ್ತಿ ನಂತರವೂ ಎರಡು ವರ್ಷಗಳ ಅವಧಿಗೆ ಸೇವೆಯನ್ನು ಮುಂದುವರೆಸುವ ಸಂಬಂಧ ಸರ್ಕಾರಕ್ಕೆ ಪತ್ರ ಬರೆದು, ಸರ್ಕಾರದ ನಿರ್ದೇಶನದ ಮೇರೆಗೆ ಕ್ರಮ ತೆಗೆದುಕೊಳ್ಳಲಾಗುವುದೆಂದು ಸಭೆಯಲ್ಲಿ ತಿಳಿಸಿದರು. |

| | |
|---|---|
| | ಡಾ.ಎಂ.ಎಸ್.ದಾಮೋದರ್ ಅವರು ಮಾತನಾಡಿ, ನಿವೃತ್ತಿ ನಂತರವೂ ಕೆಲವರ ಸೇವೆಯನ್ನು ಮುಂದುವರೆಸುವ ಪ್ರಕ್ರಿಯೆಯು ಪುನರಾವರ್ತಿತವಾಗಿರುವುದು ಕಂಡು ಬಂದಿದ್ದು, ಇದರಿಂದ ಆ ಹುದ್ದೆಗಳಲ್ಲಿ ಇತರರು ಕಾರ್ಯನಿರ್ವಹಿಸುವುದರಿಂದ ವಂಚಿತರಾಗುತ್ತಿದ್ದಾರೆ. ಆದ್ದರಿಂದ ಶ್ರೀ ಹೆಚ್. ಕುಮಾರ್, ಕಾರ್ಯಪಾಲಕ ಅಭಿಯಂತರರು, ಇಂಜಿನಿಯರಿಂಗ್ ವಿಭಾಗ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು ಇವರನ್ನು ನಿವೃತ್ತಿ ನಂತರ ಸೇವೆಯಲ್ಲಿ ಮುಂದುವರೆಸದಿರುವುದು ಸೂಕ್ತ. ಒಂದು ವೇಳೆ ಮುಂದುವರೆಸುವುದಾದರೆ ಸರ್ಕಾರಕ್ಕೆ ಒಂದು ವರ್ಷ ಮಾತ್ರ ಮುಂದುವರೆಸಲು ಪತ್ರ ಬರೆಯಬೇಕೆಂದು ತಿಳಿಸಿದರು. ಈ ಪ್ರಸ್ತಾವನೆಗೆ ಇತರೆ ಸಿಂಡಿಕೇಟ್ ಸದಸ್ಯರುಗಳು ದನಿಗೂಡಿಸಿದರು. |
| ತೀರ್ಮಾನ | ಶ್ರೀ ಹೆಚ್. ಕುಮಾರ್, ಕಾರ್ಯಪಾಲಕ ಅಭಿಯಂತರರು, ಇಂಜಿನಿಯರಿಂಗ್ ವಿಭಾಗ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು ಇವರನ್ನು ನಿವೃತ್ತಿ ನಂತರವು ವಿಶ್ವವಿದ್ಯಾನಿಲಯದಲ್ಲಿ ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾನಿಲಯದವರು ಅನುಸರಿಸುತ್ತಿರುವ ಮಾದರಿಯಲ್ಲಿ ಸ್ಥಾನಿಕ ಅಭಿಯಂತರರಾಗಿ (Resident Engineer) ಸದರಿಯವರ ಸೇವೆಯನ್ನು ಒಂದು ವರ್ಷದ ಅವಧಿಗೆ ಬಳಸಿಕೊಳ್ಳಲು ಸರ್ಕಾರಕ್ಕೆ ಪತ್ರವನ್ನು ಬರೆದು, ಸರ್ಕಾರದ ನಿರ್ದೇಶನದ ಮೇರೆಗೆ ಕ್ರಮ ತೆಗೆದುಕೊಳ್ಳಲು ಸಭೆಯು ಅನುಮೋದಿಸಿತು. |
| 2020/8.29 | ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಕಾರ್ಯನಿರ್ವಹಿಸುತ್ತಿರುವ ಎಲ್ಲಾ ಅತಿಥಿ ಉಪನ್ಯಾಸಕರುಗಳಿಗೆ ಅವರುಗಳ ಸೇವೆಯನ್ನು 2020-21ನೇ ಶೈಕ್ಷಣಿಕ ಸಾಲಿನಲ್ಲಿ ಆಹ್ವಾನಿಸುವ ಬಗ್ಗೆ. |
| | ದೇಶಾದ್ಯಂತ ಕೋವಿಡ್-19 ವೈರಾಣು ವ್ಯಾಪಕವಾಗಿ ಹರಡುತ್ತಿರುವ ಹಿನ್ನೆಲೆಯಲ್ಲಿ ಮೈಸೂರು ವಿಶ್ವವಿದ್ಯಾನಿಲಯದ ಎಲ್ಲಾ ಅಧ್ಯಯನ ವಿಭಾಗ/ಕೇಂದ್ರ/ಸಂಸ್ಥೆ/ಘಟಕ ಕಾಲೇಜುಗಳಲ್ಲಿ 2019-20ನೇ ಶೈಕ್ಷಣಿಕ ಸಾಲಿನಲ್ಲಿ ಅತಿಥಿ ಉಪನ್ಯಾಸಕರುಗಳಾಗಿ ಕಾರ್ಯನಿರ್ವಹಿಸುತ್ತಿದ್ದ ಎಲ್ಲಾ ಅತಿಥಿ ಉಪನ್ಯಾಸಕರುಗಳ ಸೇವೆಯನ್ನು ಅವರುಗಳು ನಿರ್ವಹಿಸುತ್ತಿದ್ದ ಬೋಧನಾ ಕಾರ್ಯಭಾರದೊಂದಿಗೆ ಇದೊಂದು ವಿಶೇಷ ಸಂದರ್ಭ ಎಂದು ಪರಿಗಣಿಸಿ ಹಾಗೂ ಸಿಂಡಿಕೇಟ್ ಸಭೆಯ ಅನುಮೋದನೆಯನ್ನು ಕಾಯ್ದಿರಿಸಿ 2020-21ನೇ ಶೈಕ್ಷಣಿಕ ಸಾಲಿಗೆ ಅರ್ಜಿಗಳನ್ನು ಆಹ್ವಾನಿಸಿ ದಿನಾಂಕ: 01-09-2020ರಿಂದ ಜಾರಿಗೆ ಬಂದಂತೆ ಆದೇಶ ನೀಡಲಾಗಿದೆಯೆಂದು ಮಾನ್ಯ ಕುಲಪತಿಯವರು ಸಭೆಯಲ್ಲಿ ತಿಳಿಸಿದರು.<br><br>ಡಾ.ಎಂ.ಎಸ್.ದಾಮೋದರ್ ಅವರು ಮಾತನಾಡಿ, ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಕಾರ್ಯನಿರ್ವಹಿಸುತ್ತಿರುವ ಅತಿಥಿ ಉಪನ್ಯಾಸಕರುಗಳಿಗೆ ಈಗ ನೀಡುತ್ತಿರುವ ವೇತನವನ್ನು ಹೆಚ್ಚಿಸಬೇಕೆಂದು ತಿಳಿಸಿದರು.<br><br>ಡಾ.ಈ.ಸಿ.ನಿಂಗರಾಜ ಗೌಡ ಅವರು ಮಾತನಾಡಿ, ಪಿಹೆಚ್.ಡಿ/NET/KSET ವಿದ್ಯಾರ್ಹತೆ ಹೊಂದಿಲ್ಲದೇ ಕೇವಲ ಸ್ನಾತಕೋತ್ತರ ಪದವಿ ಹೊಂದಿರುವ ಅಭ್ಯರ್ಥಿಗಳನ್ನು ಸ್ನಾತಕೋತ್ತರ ಕೋರ್ಸುಗಳಿಗೆ ಅತಿಥಿ ಉಪನ್ಯಾಸಕರುಗಳಾಗಿ ನೇಮಕ ಮಾಡಿರುವುದು ಕಂಡು ಬಂದಿರುತ್ತದೆ. ಸ್ನಾತಕೋತ್ತರ ಕೋರ್ಸುಗಳಿಗೆ ಪಿಹೆಚ್.ಡಿ/NET/KSET ವಿದ್ಯಾರ್ಹತೆ ಹೊಂದಿರುವವರನ್ನು ಮಾತ್ರ ಅತಿಥಿ ಉಪನ್ಯಾಸಕರುಗಳಾಗಿ ನೇಮಕ ಮಾಡಬೇಕೆಂದು ತಿಳಿಸಿದರು. ಇದಕ್ಕೆ ಪ್ರತಿಕ್ರಿಯಿಸಿದ ಮಾನ್ಯ ಕುಲಪತಿಯವರು ಅತಿಥಿ ಉಪನ್ಯಾಸಕರ ಹುದ್ದೆಗೆ ಅರ್ಜಿಗಳಲ್ಲಿ ಪಿಹೆಚ್.ಡಿ/NET/KSET ವಿದ್ಯಾರ್ಹತೆ ಹೊಂದಿರುವ ಅಭ್ಯರ್ಥಿಗಳ ಪಟ್ಟಿಯನ್ನು ಸಿದ್ಧಪಡಿಸಿ, ಪಿಹೆಚ್.ಡಿ/NET/KSET ವಿದ್ಯಾರ್ಹತೆ ಹೊಂದಿರುವ ಅಭ್ಯರ್ಥಿಗಳನ್ನು ಮಾತ್ರ ಸ್ನಾತಕೋತ್ತರ ಕೋರ್ಸುಗಳಿಗೆ ಅತಿಥಿ ಉಪನ್ಯಾಸಕರನ್ನಾಗಿ ನೇಮಕ ಮಾಡಲಾಗುವುದು. ಒಂದು ಸ್ನಾತಕೋತ್ತರ ಕೋರ್ಸಿನಲ್ಲಿ ಪಿಹೆಚ್.ಡಿ/NET/KSET ವಿದ್ಯಾರ್ಹತೆ ಹೊಂದಿರುವ ಅಭ್ಯರ್ಥಿಯು ಅರ್ಜಿ ಸಲ್ಲಿಸಿದ್ದು, ಕೇವಲ ಸ್ನಾತಕೋತ್ತರ ಪದವಿ ಪಡೆದಿರುವ ಅಭ್ಯರ್ಥಿಯನ್ನು ಸ್ನಾತಕೋತ್ತರ ಕೋರ್ಸಿಗೆ ಅತಿಥಿ ಉಪನ್ಯಾಸಕರನ್ನಾಗಿ ನೇಮಕ ಮಾಡಿರುವುದು ಕಂಡು ಬಂದಲ್ಲಿ, ಆ ಕೋರ್ಸಿಗೆ |

ಪಿಹೆಚ್.ಡಿ/NET/KSET ವಿದ್ಯಾರ್ಹತೆ ಹೊಂದಿರುವ ಅಭ್ಯರ್ಥಿಯನ್ನು ಸ್ನಾತಕೋತ್ತರ ಕೋರ್ಸುಗಳಿಗೆ ನೇಮಕ ಮಾಡಲು ಕೂಡಲೇ ಕ್ರಮ ತೆಗೆದುಕೊಳ್ಳಲಾಗುವುದೆಂದು ತಿಳಿಸಿದರು.

**ತೀರ್ಮಾನ**

2019-20ನೇ ಶೈಕ್ಷಣಿಕ ಸಾಲಿನಲ್ಲಿ ಅತಿಥಿ ಉಪನ್ಯಾಸಕರುಗಳಾಗಿ ಕಾರ್ಯನಿರ್ವಹಿಸುತ್ತಿದ್ದ ಎಲ್ಲಾ ಅತಿಥಿ ಉಪನ್ಯಾಸಕರುಗಳ ಸೇವೆಯನ್ನು ಅವರುಗಳು ನಿರ್ವಹಿಸುತ್ತಿದ್ದ ಬೋಧನಾ ಕಾರ್ಯಭಾರದೊಂದಿಗೆ 2020-21ನೇ ಶೈಕ್ಷಣಿಕ ಸಾಲಿನಲ್ಲಿ ಅರ್ಜಿಗಳನ್ನು ಆಹ್ವಾನಿಸಿ, ಮುಂದುವರೆಸಿರುವ ಕ್ರಮವನ್ನು ಸಿಂಡಿಕೇಟ್ ಸಭೆಯು ಅನುಸಮರ್ಥಿಸಿತು.

**2020/8.30** Promotions to University Teachers under UGC-CAS.

**Decision**

The recommendations of the Selection cum Screening Committee for promotion of following teachers under UGC-CAS, in respective subjects placed before the meeting is approved.

Further, the Syndicate decided to extend the monetary benefits from the date of the meeting of Syndicate i.e. 04-09-2020.

**ASSISTANT PROFESSOR-STAGE-2 [AGP Rs.7000/- to 8000/- (UG)]**

| Sl. No. | Name | Subject | Date of reporting to duty as assistant Professor (AGP Rs.7000) | Date of reporting to duty as Assistant Professor (AGP Rs.8000) | Remarks |
|---|---|---|---|---|---|
| 1 | Dr.Chethana H R | Folklore | 13-07-2011 | 13-07-2016 | Recommended |
| 2 | Dr.Anantha R | Sericulture | 05-05-2009 | 05-05-2014 | Recommended |

**2020/8.31** ಕಿಕ್ ಬಾಕ್ಸಿಂಗ್ ತರಬೇತುದಾರರು, ಯೋಗಾಸನ ತರಬೇತುದಾರರು ಹಾಗೂ ಕಬ್ಬಡ್ಡಿ ತರಬೇತುದಾರರು ಹುದ್ದೆಗಳನ್ನು ಮೈಸೂರು ವಿಶ್ವವಿದ್ಯಾನಿಲಯದ ದೈಹಿಕ ಶಿಕ್ಷಣ ವಿಭಾಗಕ್ಕೆ ಮಂಜೂರು ಮಾಡುವ ಬಗ್ಗೆ.

ಮಾನ್ಯ ಕುಲಪತಿಯವರು ಮಾತನಾಡಿ, ಕಿಕ್ ಬಾಕ್ಸಿಂಗ್ ತರಬೇತುದಾರರು, ಯೋಗಾಸನ ತರಬೇತುದಾರರು ಹಾಗೂ ಕಬ್ಬಡ್ಡಿ ತರಬೇತುದಾರರು ಹುದ್ದೆಗಳನ್ನು ಮೈಸೂರು ವಿಶ್ವವಿದ್ಯಾನಿಲಯದ ದೈಹಿಕ ಶಿಕ್ಷಣ ವಿಭಾಗಕ್ಕೆ ಮಂಜೂರು ಮಾಡಬೇಕೆಂದು ಸಿಂಡಿಕೇಟ್ ಸದಸ್ಯರಾದ ಶ್ರೀಮತಿ.ಸಹನ ಶಿವಪ್ಪ ಅವರು ಮನವಿ ಸಲ್ಲಿಸಿರುತ್ತಾರೆ. ಮೇಲ್ಕಂಡ ಕ್ರೀಡಾ ತರಬೇತುದಾರರ ಹುದ್ದೆಗಳನ್ನು ಮೈಸೂರು ವಿಶ್ವವಿದ್ಯಾನಿಲಯಕ್ಕೆ ಮಂಜೂರು ಮಾಡುವ ಸಂಬಂಧ Statute ಸಿದ್ಧಪಡಿಸಿ ಕುಲಾಧಿಪತಿಗಳ ಅಂಕಿತಕ್ಕಾಗಿ ಪ್ರಸ್ತಾವನೆ ಸಲ್ಲಿಸಬೇಕಾಗುತ್ತದೆಂದು ತಿಳಿಸಿದರು.

**ತೀರ್ಮಾನ**

ಕಿಕ್ ಬಾಕ್ಸಿಂಗ್ ತರಬೇತುದಾರರು, ಯೋಗಾಸನ ತರಬೇತುದಾರರು ಹಾಗೂ ಕಬ್ಬಡ್ಡಿ ತರಬೇತುದಾರರು ಹುದ್ದೆಗಳನ್ನು ಮೈಸೂರು ವಿಶ್ವವಿದ್ಯಾನಿಲಯದ ದೈಹಿಕ ಶಿಕ್ಷಣ ವಿಭಾಗಕ್ಕೆ ಮಂಜೂರು ಮಾಡುವ ಸಂಬಂಧ Statute ಸಿದ್ಧಪಡಿಸಿ ಕುಲಾಧಿಪತಿಗಳ ಅಂಕಿತಕ್ಕಾಗಿ ಪ್ರಸ್ತಾವನೆ ಸಲ್ಲಿಸಲು ಸಿಂಡಿಕೇಟ್ ಅನುಮೋದಿಸಿತು.

| | |
|---|---|
| 2020/8.32 | Providing Statistical package to all the students and Providing infrastructure for examination branch for evaluation purpose. |
| ತೀರ್ಮಾನ | The Syndicate approved (1) to provide Statistical package to all the students and also to procure 5,000 licences under KTTP act and (2) to provide infrastructure for examination branch for evaluation purposes by observing KTTP act. |

<u>ಇತರೆ ವಿಷಯಗಳು:</u>

1) ಕೋವಿಡ್-19 ವೈರಾಣು ಎಲ್ಲೆಡೆ ವ್ಯಾಪಕವಾಗಿ ಹರಡುತ್ತಿರುವ ಹಿನ್ನೆಲೆಯಲ್ಲಿ, ಸಂಶೋಧನಾ ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ಹೊರ ಜಿಲ್ಲೆ/ದೇಶದಲ್ಲಿದ್ದು ಸಂಶೋಧನಾ ಕಾರ್ಯ ಕೈಗೊಂಡು **ದಿನಾಂಕ: 29-03-2020 ರಿಂದ 29-09-2020ರ** ಅವಧಿಯಲ್ಲಿ ಅಂತಿಮ ಸಂಶೋಧನಾ ಮಹಾಪ್ರಬಂಧ ಮಂಡಿಸಬೇಕಾಗಿದ್ದ ವಿದ್ಯಾರ್ಥಿಗಳಿಗೆ ಡಿಸೆಂಬರ್ 2020ವರೆಗೆ ಕಾಲಾವಕಾಶವನ್ನು ನೀಡಲು ಹಾಗೂ ಮೇಲ್ಕಂಡ ದಿನಾಂಕದ ನಂತರ ಮಹಾಪ್ರಬಂಧ ಮಂಡಿಸುವ ಸಂಶೋಧನಾ ವಿದ್ಯಾರ್ಥಿಗಳಿಗೆ ವಿಶ್ವವಿದ್ಯಾನಿಲಯದ ನಿಯಮಾನುಸಾರ ಮಂಡಿಸಲು ಸಭೆಯಲ್ಲಿ ತೀರ್ಮಾನಿಸಲಾಯಿತು.

2) ಡಾ.ಎಸ್.ಡಿ.ದೊಡ್ಡಚಾರಿ ಹಾಗೂ ಡಾ.ಎಂ.ಎಸ್.ದಾಮೋದರ ಅವರುಗಳು ಮಾತನಾಡಿ, ಕಾಲೇಜು ಅಭಿವೃದ್ಧಿ ಮಂಡಳ ನಿರ್ದೇಶಕರ ಹುದ್ದೆಗೆ ಅಧಿಸೂಚನೆ ಹೊರಡಿಸಿರುವಂತೆ ಇಎಂಆರ್‌ಸಿ ನಿರ್ದೇಶಕರ ಹುದ್ದೆಗೂ ಅಧಿಸೂಚನೆ ಹೊರಡಿಸಬೇಕೆಂದು ತಿಳಿಸಿದರು. ಹಾಗೆಯೇ ವಿಶ್ವವಿದ್ಯಾನಿಲಯದಲ್ಲಿರುವ ವಿವಿಧ ಆಡಳಿತಾತ್ಮಕ ಹುದ್ದೆಗಳಲ್ಲಿ (ರಾಷ್ಟ್ರೀಯ ಸೇವಾ ಯೋಜನೆ, ಪಿಹೆಚ್.ಡಿ ವಿಭಾಗ, ಪಜಾ/ಪವ ವಿಶೇಷ ಘಟಕ, ಘಟಿಕೋತ್ಸವ ವಿಭಾಗ, ಸಂಶೋಧನಾ ನಿರ್ದೇಶನಾಲಯ ಇತರೆ) ಕಾರ್ಯನಿರ್ವಹಿಸುತ್ತಿರುವ ಅಧ್ಯಾಪಕರುಗಳ ಅವಧಿಯು ಮೂರು ವರ್ಷ ಪೂರ್ಣಗೊಂಡಿದ್ದರೆ, ಅಂತಹವರನ್ನು ಬಿಡುಗಡೆಗೊಳಿಸಿ ಬೇರೆ ಅಧ್ಯಾಪಕರುಗಳಿಗೆ ಅವಕಾಶ ಕಲ್ಪಿಸಿಕೊಡಬೇಕೆಂದು ಹಾಗೂ ಆಡಳಿತಾತ್ಮಕ ಹುದ್ದೆಗಳ ನೇಮಕಾತಿ ಅಥವಾ ನಿಯೋಜನೆಯಲ್ಲಿ ಮುಖ್ಯವಾಗಿ ಸಾಮಾಜಿಕ ನ್ಯಾಯವನ್ನು ಪರಿಗಣಿಸಬೇಕೆಂದು ತಿಳಿಸಿದರು. ಈ ಪ್ರಸ್ತಾವನೆ ಕುರಿತಂತೆ ಮಾನ್ಯ ಕುಲಪತಿಯವರು ಮಾತನಾಡಿ, ಪ್ರಸ್ತುತ ಆಡಳಿತಾತ್ಮಕ ಹುದ್ದೆಗಳಲ್ಲಿ ಮೂರು ವರ್ಷ ಪೂರ್ಣಗೊಂಡಿರುವ ಅಧ್ಯಾಪಕರುಗಳನ್ನು ಬಿಡುಗಡೆಗೊಳಿಸಿ, ಸಾಮಾಜಿಕ ನ್ಯಾಯವನ್ನು ಪರಿಗಣಿಸಿ ಇತರೆ ಅಧ್ಯಾಪಕರುಗಳನ್ನು ನಿಯೋಜಿಸಲಾಗುವುದೆಂದು ತಿಳಿಸಿದರು.

3) ಕಾಲೇಜು ಅಭಿವೃದ್ಧಿ ಮಂಡಳಿ ನಿರ್ದೇಶಕರ ಆಯ್ಕೆ ಸಮಿತಿಗೆ ಸಿಂಡಿಕೇಟ್ ಪ್ರತಿನಿಧಿಯಾಗಿ ಸಿಂಡಿಕೇಟ್ ಸದಸ್ಯರಾದ ಶ್ರೀ ದೊಡ್ಡಚಾರಿಯವರನ್ನು ನಾಮನಿರ್ದೇಶನ ಮಾಡಲು ಸರ್ವಾನುಮತದಿಂದ ಒಪ್ಪಲಾಯಿತು.

4) ಉರ್ದು/ಹಿಂದಿ/ಸಂಸ್ಕೃತ ಇತರೆ ವಿಷಯಗಳಲ್ಲಿ ಸಂಶೋಧನಾ ವಿದ್ಯಾರ್ಥಿಗಳು ಮಹಾಪ್ರಬಂಧವನ್ನು ಆಯಾಯ ಭಾಷೆಗಳಲ್ಲೇ (ಅಂದರೆ ಉರ್ದು ಮಹಾಪ್ರಬಂಧವನ್ನು ಉರ್ದು ಭಾಷೆಯಲ್ಲಿ, ಹಿಂದಿ ಮಹಾಪ್ರಬಂಧವನ್ನು ಹಿಂದಿ ಭಾಷೆಯಲ್ಲಿ, ಸಂಸ್ಕೃತ ಮಹಾಪ್ರಬಂಧವನ್ನು ಸಂಸ್ಕೃತ ಭಾಷೆಯಲ್ಲಿ ಇತರೆ) ಸಿದ್ಧಪಡಿಸಿ ಮಂಡಿಸಬೇಕೆಂದು ಈ ಹಿಂದೆ ವಿಶ್ವವಿದ್ಯಾನಿಲಯದ ವತಿಯಿಂದ ಆದೇಶ ಹೊರಡಿಸಲಾಗಿತ್ತು. ಆದರೆ, ಸಂಶೋಧನಾ ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ಆಯಾಯ ಭಾಷೆ ಅಥವಾ ಕನ್ನಡ/ಇಂಗ್ಲೀಷ್ ಭಾಷೆಯಲ್ಲೂ ಸಂಶೋಧನಾ ಮಹಾಪ್ರಬಂಧ ಸಿದ್ಧಪಡಿಸಲು ಅವಕಾಶ ಮಾಡಿಕೊಡಬೇಕೆಂದು ಸಂಶೋಧನಾ ವಿದ್ಯಾರ್ಥಿಗಳು ಮನವಿ ಸಲ್ಲಿಸಿರುವ ಹಿನ್ನೆಲೆಯಲ್ಲಿ, ಈ

ಸಂಬಂಧ ಸಿಂಡಿಕೇಟ್ ಸದಸ್ಯರಾದ ಶ್ರೀ.ಆರ್.ಪ್ರದೀಪ್ ಕುಮಾರ್ ದೀಕ್ಷಿತ್ ಅವರ ಅಧ್ಯಕ್ಷತೆಯಲ್ಲಿ ಸಮಿತಿಯನ್ನು ರಚಿಸಿ ವರದಿ ಸಲ್ಲಿಸಲು ಸಭೆಯಲ್ಲಿ ತೀರ್ಮಾನಿಸಲಾಯಿತು.

5) ಮಾನ್ಯ ಕುಲಪತಿಗಳು ವಿಶ್ವವಿದ್ಯಾನಿಲಯದಲ್ಲಿ ಈಗಾಗಲೇ ಅಗತ್ಯಕ್ಕಿಂತ ಹೆಚ್ಚಿನ ತಾತ್ಕಾಲಿಕ ದ್ವಿದಗು, ಪರಿಚಾರಕ ಮತ್ತು ಸೇವಕರನ್ನು ನೇಮಕ ಮಾಡಲಾಗಿರುವುದನ್ನು ಸಭೆಯ ಗಮನಕ್ಕೆ ತಂದರು. ಸಭೆಯು ದಿನಾಂಕ 21.09.2020 ರಿಂದ 31.01.2022 ರವರೆಗೆ ಸದರಿ ಹುದ್ದೆಗಳಿಗೆ ಯಾವುದೇ ತಾತ್ಕಾಲಿಕ ನೇಮಕಾತಿಯನ್ನು ಮಾಡಬಾರದೆಂದು ತೀರ್ಮಾನಿಸಿತು.

ಕುಲಸಚಿವ ಮತ್ತು ಸದಸ್ಯ ಕಾರ್ಯದರ್ಶಿ

ಕುಲಪತಿ ಮತ್ತು ಅಧ್ಯಕ್ಷರು